ಉಪನ್ಯಾಸ ಗ್ರಂಥಮಾಲೆ

೩೪೭

ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ

ಬಸವರಾಜ ಸಬರದ

ಎಂ.ಎ., ಡಿಪ್. ಎಪಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಮಾರ್ಚ, ೧೯೮೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ

ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ-೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸ ಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆ ಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆ ಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೩೧ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನ ಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ ಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ ಡಿ. ಎಂ. ನಂಜುಂಡಪ್ಪ
ಧಾರವಾಡ–೫೮೦ ೦೦೩ ಕುಲಪತಿಗಳು

ಪ್ರಾಸ್ತಾವಿಕ

ದಿ. ೩೦-೮-೧೯೭೮ ರಂದು ವಿಜಾಪುರ ಜಿಲ್ಲೆಯ ಜಕನೂರಲ್ಲಿ ನನ್ನ ಉಪನ್ಯಾಸವನ್ನಿಟ್ಟು ಈ ಕೃತಿ ಹೊರಬರಲು ಕಾರಣರೂ ಪ್ರಸಾರಾಂಗದ ನಿರ್ದೇಶಕರೂ ಆದ ಸನ್ಮಾನ್ಯ ಶ್ರೀ ಚೆನ್ನವೀರ ಕಣವಿ ಯವರನ್ನ; ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರನ್ನ; ನನ್ನ ಬದುಕು-ಬರೆಹಗಳಿಗೆ ಸಲಹೆಗಳನ್ನಿತ್ತ ಡಾ.ಮ.ಗು. ಬಿರಾದಾರ ಹಾಗೂ ಡಾ. ಮಲ್ಲಿನಾಥ ಕಲಬುರ್ಗಿ, ಪ್ರೊ. ಸೋಮಶೇಖರ ಇಮ್ರಾಪೂರ-ಗುರುಗಳನ್ನ; ಇದನ್ನು ಬರೆಯುವಲ್ಲಿ ಸಹಕರಿಸಿದ ನನ್ನ ಸತಿ ಪ್ರೊ. ವಿಜಯಶ್ರೀಯನ್ನ; ಮರೆಯುವದಾದರೂ ಹೇಗೆ! ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

೩೦-೩-೧೯೮೨ ಬಸವರಾಜ ಸಬರದ

ಪರಿವಿಡಿ

ಮುನ್ನುಡಿ	III
ಪ್ರಾಸ್ತಾವಿಕ	V
ಪ್ರಣಯದ ಹುಟ್ಟು ಬೆಳವಣಿಗೆ . .	೧
ಪ್ರಣಯ ಸಂಕೇತಗಳು . . .	೭
ಪ್ರಣಯದ ತಾಣಗಳು . . .	೧೨
ಪ್ರಣಯ ಚೇಷ್ಟೆಗಳು . . .	೧೮
ಗೆಣೆಯಾ–ಗೆಣತಿಯರ ಪ್ರಣಯ . .	೨೪
ಗಂಡಾ-ಹೆಂಡತಿಯರ ಪ್ರಣಯ : .	೩೫
ಮುದಕಾ–ಮುದಕಿಯರ ಪ್ರಣಯ . .	೪೩
ಸರಸ–ವಿರಸ	೪೭

೧. ಪ್ರಣಯದ ಹುಟ್ಟು ಬೆಳವಣಿಗೆ

ಕನ್ನಡನಾಡಿನ ಅಜ್ಞಾತ ರಸಋಷಿಗಳು ಬಿಟ್ಟು ಹೋಗಿರುವ ಚಿರ ಆಸ್ತಿಯೆಂದರೆ ಜನಪದ ಸಾಹಿತ್ಯ. ಅನೇಕ ಮೇಧಾವಿಗಳ ಹಾಗೂ ಅನುಭವಿಕರ ಸಾವಿರಾರು ವರ್ಷಗಳ ಜೀವನಾನುಭವ ಭಟ್ಟಿ ಇಳಿದು ಜನಪದ ಕಾವ್ಯದಲ್ಲಿ ಸುಶ್ರಾವ್ಯವಾಗಿ ಹೊರ ಸೂಸಿದೆ. ಕನ್ನಡನಾಡಿನ ಸಂಸ್ಕೃತಿ ಇಲ್ಲಿ ಹೊನಲಾಗಿ ಹರಿದಿದೆ. ಜನಪದ ಕಾವ್ಯದಲ್ಲಿ ಬರುವ ಪ್ರಣಯ ಚಿತ್ರಣ ವೈವಿಧ್ಯಮಯ ವಾದುದು, ವರ್ಣರಂಜಿತವಾದುದು.

ಪ್ರಣಯವೆಂದರೆ ಪ್ರೇಮ, ಅನುರಾಗ ಎಂಬರ್ಥವನ್ನು ಕೊಡುತ್ತದೆ. ಗಂಡು-ಹೆಣ್ಣಿನ ಮಿಲನವೇ ಪ್ರಣಯಕ್ಕೆ ಹಾಡುವ ಪ್ರಪ್ರಥಮ ನಾಂದಿ. ಪ್ರೇಮ-ಕಾಮಗಳು ಒಂದು ನಾಣ್ಯದ ಎರಡು ಮುಖಗಳಂತೆ. ಹೆಚ್ಚಾಗಿ ಅವು ಒಂದನ್ನೊಂದಗಲಿ ಇರಲಾರವು. ನಿಷ್ಕಾಮ ಪ್ರೇಮ ಕಾಣುವದು ಬಹಳ ಅಪರೂಪ.

'ಮೀಸೆ ಬಂದಾತಗ ದೇಶ ಕಾಣಂಗಿಲ್ಲಂತ
ಮಲಿ ಬಂದಾಕಿಗಿ ನೆಲ ಕಾಣಂಗಿಲ್ಲಂತ'

ಎಂಬ ಗಾದೆ ಮಾತು ಬಹಳ ಅರ್ಥಪೂರ್ಣವದು. ಹರೆಯದ ಬಿಸಿರಿಯೇ ಅಂತಹದು. ಹಾಗೆ ಹರೆಯಕ್ಕೆ ಬಂದ ಹುಡುಗನ ಮನಸ್ಸು ಹುಡುಗಿಯ ಸಂಗ ಬಯಸುತ್ತದೆ. ಹುಡುಗಿಗೂ ಕೂಡ ಪ್ರೇಮದ ಅರಳಿ ಹುಡುಗನನ್ನು ಕೂಡಲು ತವಕಪಡುತ್ತಿರುತ್ತಾಳೆ.

ಆದರೂ ಹೆಣ್ಣು ನಾಚಿಕೆಯ ಸ್ವಭಾವದವಳು. ಅಂತೆಯೇ ಮೊದಲು ಪ್ರಾರಂಭಿಸುವವನು ಗಂಡೇ. ಈತ ಚಾಲೂ ಮಾಡಿಬಿಟ್ಟನೆಂದರೆ ತೀರಿತು ಎಲ್ಲಿ ಹೋದರೂ ಈತನನ್ನು ಆಕೆ ಬಿಡಲಾರಳು. ಹುಡುಗ ನೇರವಾಗಿ ನೋಡಿದರೆ ಹುಡುಗಿ ನೆಲ ಕೆದರುತ್ತಲೇ ನೋಡಿಬಿಟ್ಟಿರುತ್ತಾಳೆ. ಹೀಗೆ ಪ್ರಣಯದ ಹುಟ್ಟು ಪ್ರಾರಂಭವಾಗುತ್ತದೆ.

'ಕಾಮ ಕಂಪಾಗಿ ಬರಲು ಕಾಯ ಕೆಂಪೇರಲು
ಉಬ್ಬುಡುಗಿ ನೀರಿಗೆ ಸಡಿಲ್ಯಾವೊ ದೇವಾ ॥ತುಂ॥'

ಜನಪದ ಮಹಾಭಾರತದಲ್ಲಿ ಹೆಣ್ಣು ಹಾಡಿದ ಈ ಹಾಡು ಪ್ರಾರಂಭದ ಘಟ್ಟವನ್ನು ಪ್ರತಿಬಿಂಬಿಸುತ್ತದೆ. ಮೊಗಮೀಸೆಯೊಡೆದ ಹುಡುಗನಿಗೆ ಹುಡುಗಿಯರ ಸಂಗಡ ಮಾತನಾಡಿಸಬೇಕೆನಿಸುತ್ತದೆ. ಹುಡುಗಿಗಾದರೂ ಕೂಡ ಅದೇ ಬಯಕೆ ಕಾಡುತ್ತದೆ.

ಗಂಡು-ಹೆಣ್ಣುಗಳ ಮನಸ್ಸು-ವಿಚಾರ, ಆಶೆ-ಆಂಕಾಕ್ಷೆಗಳೊಂದಿಗೆ ಒಬ್ಬರಿಗೊಬ್ಬರು ಮಿಲನವಾಗುವದೇ ಪ್ರಣಯವೆಂದೆನ್ನಬಹುದು.

"Love is blind. and lovers cannot see the pretty follies they themselves commit"

ಎನ್ನುವ ಶೇಕ್ಸಪಿಯರ್‌ನ ಮಾತಿನಲ್ಲಿ ಹರೆಯದ ಮಬ್ಬಿನಲ್ಲಿ ಬರೀ ಕಾಮದ ಬೆನ್ನು ಹತ್ತಿ ಹೋದ ಪ್ರಣಯಿಗಳ ಹುಚ್ಚಿಗೆ ಪ್ರೇಮ ತನ್ನ ಅಸ್ತಿತ್ವವನ್ನು ಕಳೆದುಕೊಂಡು ನುಚ್ಚು ನೂರಾಗುತ್ತದೆ.

"Love is biology plus culture"

ಎಂಬ ಲೆನಿನ್ನನ ಮಾತು ಕೂಡ ಅಷ್ಟೇ ಸತ್ಯವಾದುದು. ಪ್ರಾಣಿಧರ್ಮ ಮತ್ತು ಸಂಸ್ಕೃತಿಗಳ ಮಿಲನವೇ ಪ್ರೀತಿ ಎನ್ನುವ ಈ ವ್ಯಾಖ್ಯೆ ತಾತ್ವಿಕವಾದುದು.

"ಪ್ರಕೃತಿಜನ್ಯ ಗುಣಗಳನ್ನೆಲ್ಲ ಹೊಂದಿ ಹುಟ್ಟಿದ ವಿರುದ್ಧ ಲಿಂಗಿಗಳಲ್ಲಿಯ ಒಂದು ರೀತಿಯ ಅಮೂರ್ತವಾದ ಆಕರ್ಷಣೆಯೇ ಪ್ರೇಮ-ಪ್ರೀತಿ ಎನಿಸಿಕೊಳ್ಳುತ್ತದೆ. ಪ್ರೇಮ ಬೆಂಕಿಯೂ ಹೌದು, ಜ್ಯೋತಿಯೂ ಹೌದು. ಅದರಿಂದ ಬೆಳಕು ಪಡೆದವರುಂಟು,ಬೆರಳು ಸುಟ್ಟುಕೊಂಡವರುಂಟು. ಇದರಲ್ಲಿ ಸರಸವಿದೆ ವಿರಸವಿದೆ, ಸಮರಸವಿದೆ. ಪ್ರೀತಿಯಲ್ಲಿ ಸೋಲಿಗೂ ಗೆಲುವಿದೆ, ಆ ಗೆಲುವಿನಲ್ಲಿಯೇ ವ್ಯಕ್ತಿಯ ಜೀವನದ ವಿಕಾಸವಿದೆ."[1] ಎನ್ನುವ ವಿಚಾರಗಳೂ ಕೂಡ ಅದನ್ನೇ ಧ್ವನಿಸುತ್ತವೆ.

ಪ್ರೀತಿ-ಪ್ರೇಮವಿಲ್ಲದೆ ಬದುಕುವ ಬದುಕು ಅದು ಬದುಕೇ ಅಲ್ಲ. ಪ್ರೀತಿಯನ್ನರಿಯದವನಂತಹ ದುರ್ದೈವಿ ಮತ್ತಾರೂ ಇಲ್ಲ. ಒಬ್ಬರಿಗೊಬ್ಬರು ಅರಿತುಕೊಂಡು ಪ್ರೇಮಿಸಿದ ಪ್ರೀತಿ ದಾಂಪತ್ಯದಲ್ಲಿ ಸಮರಸವಾದಾಗ ಅದರ ಐಸಿರಿ ಹೇಳತೀರದು, ಅಂತೆಯೇ ಜೀವಿಸಬೇಕು-ಪ್ರೇಮಿಸುವಹಾಗಿದ್ದರೆ ಮಾತ್ರ. ಅಂದರೇನೇ ಆ ಜೀವನಕ್ಕೊಂದು ಅರ್ಥ ಬರುತ್ತದೆ.

ಬಾವಿಯ ದಂಡಿಯ ಮೇಲೆ ನಿಂತ ಬಾಲೆಯನ್ನು ಕಂಡ ಹುಡುಗ ಮನದಲ್ಲಿಯೇ ಲೆಕ್ಕ ಹಾಕಿಕೊಳ್ಳುತ್ತಾನೆ :

---

1 ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ

– ಪ್ರೊ. ಸೋಮಶೇಖರ ಇಮ್ರಾಪೂರ.

ಬಾವಿದಂಡಿಗಿ ನಿಂತು ಬ್ಯಾಳ ಗೇನಸತಾಳ
ಬೀಳತಾಳೇನ ಬಲಿಯಾಕ। ಆ ಬಾಲಿ
ಕಾಣತಾಳೇನ ಕೈಲಾಸ.

ಆಕೆಯು ಪ್ರತಿಯೊಂದು ಚಲನ–ವಲನವನ್ನು ಕಣ್ಣಲ್ಲಿ ಕಣ್ಣಿಟ್ಟು ನೊಡುತ್ತಾನೆ. ತನ್ನ ಬಲೆಯಲ್ಲಿ ಕೆಡವಿಕೊಳ್ಳಲು ಯತ್ನಿಸುತ್ತಾನೆ. ಹುಡುಗ ತನ್ನನ್ನು ನೋಡುತ್ತಿರುವದು, ತನ್ನ ಬಗ್ಗೆ ಗ್ಯಾನಿಸುತ್ತಿರುವದು ಹುಡುಗಿಗೆ ಗೊತ್ತಾದರೆ ಒಳಗೊಳಗೇ ಹಿಗ್ಗುತ್ತಾಳೆ. ಆದರೂ ಆಕೆ ಅದನ್ನು ಒಮ್ಮೆಲೇ ತೋರಿಸಳು. ಇಂತಹ ಸಮಯದಲ್ಲಿ ಅವನು ಸುಂದು ಬಡೆದವನಂತಿರುತ್ತಾನೆ. ಆಕೆಯದು ತನ್ನ ಮೇಲೆ ಮನಸ್ಸಿದೆ ಎಂಬುದು ಖಾತ್ರಿಯಾದಾಗ ಬಹಳಷ್ಟು ಖುಷಿ ಪಡುತ್ತಾನೆ.

ಮರುದಿನ ಬಾವಿಗೆ ನೀರು ತರಲು ಬಂದಾಗ ಸುತ್ತಲೂ ನೋಡಿ ಯಾರೂ ಇಲ್ಲದ್ದನ್ನು ಮನಗಂಡು ಗಪ್ಪನೇ ಕೈ ಹಿಡಿಯುತ್ತಾನೆ. ಆಗ ಇಬ್ಬರಿಗೂ ಮೈಯಲ್ಲಿ ಕರೆಂಟ ಶಾಖ್ ಹೊಡೆದಂತೆ. ಆಕೆ ರೋಮಾಂಚನದಿಂದ ಪುಳುಕಿತಗೊಳ್ಳುತ್ತಾಳೆ.

ಸಂಪಿಗಿ ತೆನಿಯಂತ ಹುಡುಗ
ಸಂತ್ಯಾಗ್ಹಾದು ಹೋಗ್ಯಾನ
ಇವನ ರೂಪ ಅಪರೂಪ
ಹಚ್ಚಿದಾಂಗ ಚಂದ್ರದೀಪ
ಚಕ್ಕರಗಣ್ಣ ಕೊಕ್ಕರಮೀಸಿ
ನಕ್ಕರ ಚಂದ ನನಮುಂದ

ಸಂತೆಯಲ್ಲಿ ಹಾಯ್ದು ಹೊರಟ ಸಂಪಿಗೆ ತೆನಿಯಂತ ಹುಡುಗನನ್ನು
ಕಂಡ ಆಕೆಯು ಮನಸ್ಸು ಒಪ್ಪಿಸುತ್ತಾಳೆ, ದೇಹ ಅರ್ಪಿಸುತ್ತಾಳೆ.
ಈ ಪ್ರಣಯ ಆಯುಸ್ಕಾಂತವಿದ್ದ ಹಾಗೆ. ಪ್ರಣಯಿಗಳು ಎಲ್ಲಿಯೇ
ಇರಲಿ ಒಬ್ಬರಿಗೊಬ್ಬರನ್ನು ಆಕರ್ಷಿಸುತ್ತದೆ, ಜಗ್ಗಿಕೊಳ್ಳುತ್ತದೆ.

ಹುಡುಗಿ ಬಾಳೆಮೀನಾಗಿ ಮಿಂಚಿದಾಗ, ಹುಡುಗ ಚಿನ್ನದ
ಗಾಳಹಾಕಿ ಹಿಡಿಯುತ್ತಾನೆ. ಆಕೆ ಜಿಂಕೆ ಮರಿಯಾಗಿ ಚಿಮ್ಮಿದರೆ
ಆತ ಬೇಟೆಗಾರನಾಗಿ ಬರುತ್ತಾನೆ. ಹೃದಯವಾವರಿಸಿ ಮನಸ್ಸು
ದ್ದ ಹುಡುಗಿ ಎಲ್ಲಡಗಿದರೂ ಆತ ಬಿಡುವದಿಲ್ಲ.

ಕಗ್ಗ ಮಾವಿನಕಾಯಿ ಎಳಿಯ ಹುಣಸಿಕಾಯಿ
ಬಿಳಿಜ್ವಾಳದ ಕಬ್ಬ ಸುಲಿಗಾಯಿ। ಕೊಡತೀನಿ
ಎಳಿಹುಡುಗಿ ಬಗ್ಗಿ ಉಡಿವಡ್ಡ

ಎನ್ನುತ್ತಾನೆ. ಹುಡುಗಿ ಉಡಿವಡ್ಡಿದಳೆಂದರೆ ಅದು ಮಿಲನದ
ಸಂಕೇತ. ಹೀಗೆ ಹುಟ್ಟಿದ ಪ್ರಣಯದ ವೃಕ್ಷ ದಿನದಿಂದ ದಿನಕ್ಕೆ
ಬೆಳೆಯುತ್ತ ಹೋಗುತ್ತದೆ. ಒಬ್ಬರನ್ನೊಬ್ಬರು ಅಗಲಿದರೆ ಸಾಕು
ಪ್ರಣಯಿಗಳಿಗೆ ಪ್ರಾಣಹೋದಂತಾಗುತ್ತದೆ.

ನಿಬ್ಬಣ, ಮದುವೆ, ಜಾತ್ರೆ, ಸಂತೆ, ಉರುಸು ಮುಂತಾದ
ಸ್ಥಳಗಳೆಲ್ಲಾ ಪ್ರಣಯಿಗಳ ಮುಂದಿನ ಬೆಳವಣಿಗೆಗೆ ಬಹಳ
ಅನುಕೂಲವಾಗುತ್ತವೆ.

ನಿನ್ನಮಾತ ಅನುವದಿಲ್ಲ ಸುಳ್ಳ
ರತ್ನದಹಳ್ಳ
ಆದೆ ನಾ ಮಳ್ಳ ನಿನಗ ನೋಡಿ।

ಒಂದು ಗಂಡು ಹೆಣ್ಣಿಗೆ ಮಳ್ಳಾದುದನ್ನು ಹೇಳಿದರೆ ಆಕೆ–

ನಿಮ ಮನಿಗಿ ಬರತ ನಡಿ ಚದರ
ಹಿಡಿದು ನಿಮ ಪದರ
ಹುಣ್ಣವಿ ಚಂದರ್ ನಿಮಸುರತ

ಎನ್ನುತ್ತಾ ಅವನೊಡನೆ ಹಿಂಬಾಲಿಸುವದು ಗಮನಾರ್ಹವಾದುದು. ಪ್ರಣಯಿಗಳು ಒಬ್ಬರನ್ನೊಬ್ಬರು ಅರಿತುಕೊಂಡು ತಮ್ಮ-ತಮ್ಮ ಸ್ಥಿತಿಗತಿಗಳನ್ನು ತಿಳಿದುಕೊಂಡು ಮದುವೆಯಾಗಿ ದಂಪತಿಗಳಾಗಲು ಕೆಲವರು ಇಚ್ಛಿಸಿದರೆ, ಮತ್ತೆ ಕೆಲವರು ಹಾಗೇ ಮುಂದುವರೆಯುವದನ್ನು ಬಯಸುತ್ತಾರೆ.

ತನ್ನ ಸೌಂದರ್ಯದ ಬಗ್ಗೆ ತನ್ನ ಗೆಣೆಯ ವರ್ಣಿಸುವದನ್ನು ಕಂಡಾಗ ಹೆಣ್ಣಿಗೆ ಸ್ವರ್ಗ ಮೂರೇ ಗೇಣು. ಅವನಿಗಂತೂ ಆಕೆಯ ಮುಖವೇ ಬಂಗಾರವಿದ್ದ ಹಾಗೆ.

ಮಾರಿಯ ನೋಡಿದರ ಮಾವುರದ ಬಂಗಾರ
ಸೀರಿ ನೋಡಿದರ ಜರತಾರ। ಎಲೆ ಹೆಣ್ಣ
ಯಾರ ಮನವನ್ನು ಸೆಳೆಯಾವ

ಎನ್ನುತ್ತಾನೆ. ಹೀಗೆ ಒಂದಾದ ಪ್ರಣಯಿಗಳನ್ನು ಅಗಲಿಸುವದೇ ಅಸಾಧ್ಯ. ಅವರಿಗೆ ಅನುವು ಆಪತ್ತುಗಳು ಬಂದಾಗ ಒಬ್ಬರಿಗೊಬ್ಬರು ಸಹಕರಿಸಿಕೊಳ್ಳುತ್ತಾರೆ. ಚಳಿಜ್ವರ ಬಂದಾಕೆಗೆ ತನ್ನ ಗೆಣೆಯ ಬಂದು ಮಾತನಾಡಿಸಿದನೆಂದರೆ ಬಂದ ಜಡ್ಡು ಮಾಯವಾಗುವದು ಅತ್ಯಂತ ಕುತೂಹಲವಾದುದು.

ಚಳಿಜ್ವರ ಬಿಟ್ಟಾವು, ಒಳಜ್ವರ ಬಿಡಲಿಲ್ಲ
ಮಂಟಪದ ಜಾಜಿ ಮನೆಯವನೇ। ಸರದಾರ
ಮಂತ್ರೀಸಿ ಹೋಗೊ ತಲೆನೋವ

ಎಂದು ಒಳಜ್ವರದ ತಾಪವನ್ನು ತೋಡಿಕೊಳ್ಳುತ್ತಾಳೆ. ಆ ತಾಪ– ಆ ಒಳಗಿನ ನೋವು ಅವರೀರ್ವರಿಗಷ್ಟೇ ಗೊತ್ತು. ಪ್ರಣಯವೆಂದರೇನೇ ಹಾಗೆ. ಒಬ್ಬರಿಗೆ ನೋವಾಯಿತೆಂದರೆ ಅದು ಇಬ್ಬರಿಗೂ ಆದಂತೆಯೆ. ಅನ್ಯೋನ್ಯವಾದ ಪ್ರಣಯಿಗಳ ಬದುಕು ನಿಜಕ್ಕೂ ಸ್ವಾರಸ್ಯಪೂರ್ಣವಾದುದು. ಹೀಗೆ ಹುಟ್ಟಿದ ಪ್ರಣಯ ಬೆಳೆಯುತ್ತಾ ಮುಂದುವರೆಯುತ್ತದೆ.

೨. ಪ್ರಣಯ ಸಂಕೇತಗಳು

ಪ್ರತಿಮೆ ಸಂಕೇತಗಳು ಯಾವುದಾದರೂ ಒಂದು ಕಾವ್ಯಕ್ಕೆ ಮಾತ್ರ ಸೀಮಿತವಾದವುಗಳಲ್ಲ. ಜನಪದ ಕಾವ್ಯದಲ್ಲಿ ಅವುಗಳ ಸಮರ್ಥ ಬಳಕೆಯನ್ನು, ಅರ್ಥದ್ವೈಸಿರಿಯನ್ನು ವಾಸ್ತವವಾಗಿ ಕಾಣಬಹುದು. ಕಾವ್ಯದಲ್ಲಿ ಬಳಸಲ್ಪಡುವಂತಹ ಸಂಕೇತಗಳು ಹೊಸ ತಿರುವು ನೀಡಬಲ್ಲಂತವುಗಳು. ಬಿಚ್ಚಿ–ಬಿಚ್ಚಿ ಮಗ್ಗಿ ಒಪ್ಪಿಸುವದಕ್ಕಿಂತ ಧ್ವನಿಪೂರ್ಣವಾಗಿ, ಸಂಕೇತಗಳನ್ನೊಡಗೂಡಿಸಿಕೊಂಡು ಹೇಳುವದು ಹೆಚ್ಚು ಸಮರ್ಪಕ. ಪರಿಚಿತ ಪದಗಳು ಸಂಕೇತವಾಗಿ ಮೂಡಿಬಂದಾಗ ಓದುಗನಿಗೆ ಸಿಗುವ ಖುಷಿ ಅಷ್ಟಿಷ್ಟಲ್ಲ. ಆದರೆ ನವ್ಯ ಕಾವ್ಯದಲ್ಲಿ ಬಳಸಲ್ಪಟ್ಟ ಕೆಲ ಪ್ರತಿಮೆ-ಸಂಕೇತಗಳು ತೀರ ಕ್ಲಿಷ್ಟವಾಗಿ ಓದುಗನನ್ನು ಗೊಂಡಾರಣ್ಯದಲ್ಲಿ ನೂಕುತ್ತವೆ. ಜನಪದ ಕಾವ್ಯದಲ್ಲಿ ಬಳಕೆಯಾದ ಸಂಕೇತಗಳ ಬೆಡಗೇ ಬೇರೆ. ಥಟ್ಟನೇ ಹೊಳೆಯುವ, ಕಣ್ಮುಂದೆ ಬಂದೂ ಕಟ್ಟುವ ಅರ್ಥಪೂರ್ಣವಾದ ಸಂಕೇತಗಳ ಬಳಕೆಯನ್ನು ನಾವು ಜನಪದದಲ್ಲಿ ಧಾರಾಳವಾಗಿ ನೋಡಬಹುದು. ಪ್ರಣಯ ಗೀತೆಗಳಲ್ಲಂತೂ ಇದರ ಬಳಕೆ ಜಾಸ್ತಿ.

ಪ್ರಣಯ ಹೇಳಿ ಕೇಳಿ ಗೌಪ್ಯವಾಗಿ ನಡೆಯುವ ವಿಷಯ. ಬಿಚ್ಚಿಟ್ಟ ಬಾಳೆಹಣ್ಣಿನಂತೆ ಅದಾಗಬಾರದು. ಅಂತೆಯೇ ನಮ್ಮ ಜನಪದ ಕವಿಗಳು ತಮ್ಮ ಪ್ರಣಯ ಸಲ್ಲಾಪದ ನುಡಿಗಳು ತಮ-ತಮಗೆ ತಿಳಿಯುವ ಹಾಗೆ ಸಟ್ಟನೇ ಮನಕ್ಕೆ ಮುಟ್ಟುವ ಹಾಗೆ ಗೌಪ್ಯತೆಯನ್ನು ಕಾಪಾಡಿಕೊಂಡು ಬರುವಂತೆ ಬಹಳ ಸಮರ್ಥ ಪೂರ್ಣವಾಗಿ ಬಳಸಿದ್ದಾರೆ.

ನೀರು ಹೆಣ್ಣಿನ ಸಂಕೇತ :

ಹುಡುಗಿಯನ್ನು ಕೂಡಬೇಕೆಂದ ಹುಡುಗನಿಗೆ, ಹೇಗಾದರೂ ಮಾಡಿ ಆಕೆಯನ್ನು ಮಾತನಾಡಿಸಬೇಕೆನಿಸುತ್ತದೆ. ನೋಟದಲ್ಲಿಯೇ ಅರಳಿದ ಅವನ ಕಾಮ ಮಿಲನದಲ್ಲಿ ಪರಿಸಮಾಪ್ತಿಯಾಗುವವರೆಗೂ ಎಡೆ ಬಿಡದೇ ಹೋರಾಡುತ್ತದೆ. "ಬಾಯಾರಿದ್ದೇನೆ ನೀರು ಕೊಡು" ಎಂದು ಹುಡುಗಿಯನ್ನು ಕೇಳುತ್ತಾನೆ. ಅದಕ್ಕೆ ಅವಳು 'ನೀರು ಕೊಡುವ್ರೋಕೆ ನಾನ್ಯಾರೋ ನಿನ್ಯಾರೋ ಹೋಗಯ್ಯ ಹರಿವ ಜಲಧೀಗೆ' ಎನ್ನುತ್ತಾಳೆ. ಅಷ್ಟಕ್ಕೇ ಬಿಡದ ಹುಡುಗ ಮತ್ತೆ ಹೇಳುತ್ತಾನೆ.

ಹರಿಯೋ ನೀರ್ ಹಚ್ಚಗೆ ಕೆರೆಯ ನೀರ್ ಕೆಚ್ಚಗೆ
ಬಾವಿಯ ನೀರು ಸಮರುಚಿ ಹುಡುಗಿ

"ಇಲ್ಲಿ ನೀರು ಹೆಣ್ಣಿನ ಸಂಕೇತ. ಬಾವಿಯ ನೀರು ಅವಿವಾಹಿತ ಳಿಗೂ, ಕೆರೆಯ ನೀರು ವಿವಾಹಿತಳಿಗೂ, ಹರಿಯುವ ನೀರು ವೇಶ್ಯೆಗೂ ಅನ್ವಯವಾಗುವ ಸಂಕೇತಗಳು"[2]

---

2 ಕನ್ನಡ ಜನಪದ ಸಾಹಿತ್ಯ ಭಂಡಾರ–ಸಂ. ಮತ್ತಿಘಟ್ಟ ಕೃಷ್ಣಮೂರ್ತಿ ಪುಟ:೨೧

ಹೀಗೆ ನೀರು ಕೇಳುವದು ಪ್ರೇಮಯಾಚನೆಯಾದರೆ. ನೀರು ಕುಡಿಯುವದು ಮಿಲನದ ಸಂಕೇತ. ಮರದ ನೆರಳಲ್ಲಿ ಮಲಗಲು ಕೇಳುವದು ಹಣ್ಣು ಕೇಳಲಿಚ್ಛಿಸುವದು ಇವು ಪ್ರೇಮಯಾಚನೆಯಾದರೆ; ನೆರಳಲ್ಲಿ ಮಲಗುವದು, ಹಣ್ಣು ಕೇಳುವದು ಇವು ಮಿಲನದ ಸಂಕೇತಗಳು.

ಕಡಿಪಡಿ ಮನಿಯವಳ ಕಡಗದ ಕೈಯವಳ
ಹುಡುಗ ಬರತಾನ ಕರಕೊಳ್ಳ, ಎಲೆಹುಡುಗಿ
ಕಡೆಗಾಣದ ಕಡ್ಲಿ ಅಳಕೊಳ್ಳ.

ಇಲ್ಲಿ ಬಂದಿರುವ 'ಕಡ್ಲಿ ಅಳಕೋ' ಎಂದು ಕೇಳುವದು ಪ್ರೇಮಯಾಚನೆಯಾದರೆ ಅಳೆಯುವದು ಮಿಲನದ ಸಂಕೇತ.

ಹಂಡಹೋರಿಯವ್ಯಾಲ ಮಂಡಮೂಗಿನ ಹೆಣ್ಣ
ಉಂಡಿ ಕೊಡತೀನಿ ಉಡಿವಡ್ಡ । ಎಲೆ ಹುಡುಗಿ
ಬೆಂಡ ಕೊಡತೀನಿ ಬೆನ್ನತ್ತ

ಇಲ್ಲಿ ಬರುವ 'ಉಡಿವಡ್ಡ' ಎನ್ನುವದು ಪ್ರೇಮಯಾಚನೆಯಾದರೆ, ಉಡಿವಡ್ಡುವದು ಮಿಲನದ ಸಂಕೇತ. ಇದೇ ರೀತಿ ಕುಟ್ಟುವ ಕ್ರಿಯೆಯೂ ಕೂಡ ಮಿಲನದ ಸಂಕೇತ.

ಹಾದೀಯ ಮನಿಯವಳ ಹರಕ ಚಪ್ಪರದವಳ
ಹಾದ ಹೊಕ್ಕೇನಿ ನೋಡಕೊಳ್ಳ! ಎಲೆ ಹುಡುಗಿ
ಕೇಳಿ ಹೊಕ್ಕೇನಿ ಮಾಡಕೊಳ್ಳ.

ಮನೆಹೋಗಲಿಚ್ಛಿಸುವದು ಪ್ರೇಮಯಾಚನೆಯಾದರೆ, ಮನೆ ಹೋಗುವದು ಮಿಲನದ ಸಂಕೇತ.

ಪರೆಯಂದ ಹಂದರದಲ್ಲಿ ಕಾಲಿಟ್ಟ ಗೆಣೆಯ ಗೆಣತಿಯರಿಗೆ ಸುತ್ತ ಮುತ್ತ ಯಾರಾದರೂ ಜನರಿದ್ದರೆಂದರೆ ಬಹಳ ತೊಂದರೆ. ಆಗ ಅವರ ಮಿಲನಕ್ಕೆ, ಮಾತು-ಕತೆಗೆ ಕತ್ತರಿ ಬೀಳುತ್ತದೆ. ಅಂತೆಯೇ ಅವರು ಆ ಸಮಯದಲ್ಲಿ ಕಣ್ಣು ಹೊಡೆಯುವ ಸಂಕೇತವನ್ನು ಪ್ರಾರಂಭಿಸುತ್ತಾರೆ. ಎಡಗಣ್ಣು, ತುದಿಗಣ್ಣು, ಚಿವಗಣ್ಣು, ಬರಿ ಗಣ್ಣು, ಎಡಹುಬ್ಬು, ಬಲಹುಬ್ಬು ಹೀಗೆ ಅವರವರು ಮೊದಲೇ ಗೊತ್ತು ಪಡಿಸಿಕೊಂಡಂತೆ ತಮಗೆ ಬೇಕಾದ ರೀತಿಯಂತೆ ಕಣ್ಣು ಹೊಡೆದು ತಮ್ಮ ಕೆಲಸಕ್ಕೆ ಅನುಕೂಲ ಮಾಡಿಕೊಳ್ಳುತ್ತಾರೆ. ಬರಿಗಣ್ಣು ಬಿಟ್ಟರೆ 'ಸಿಟ್ಟಿಗೆ ಬಂದು ಬೇಡ' ವೆಂಬ ಅರ್ಥವಾದರೆ, ನಗೆಮೊಗದಿಂದ ಎಡಗಣ್ಣು ಹಾರಿಸಿದರೆ ಅದು ಮಿಲನದ ಸಂಕೇತ. ಸಿಕ್ಕ ಸಿಕ್ಕವರಿಗೆ, ನೋಡಿ ನೋಡಿದವರಿಗೆ ಹುಡುಗ ಕಣ್ಣು ಹೊಡೆ ಯಲು ಪ್ರಾರಂಭಿಸಿದನೆಂದರೆ ಕೊನೆಗೊಮ್ಮೆ ಮಣ್ಣು ಮುಕ್ಕ ಬೇಕಾಗುತ್ತದೆ.

> ಕಣ್ಣ ಹೊಡಿಯಲಿ ಬ್ಯಾಡ ಬೆನ್ನು ಹತ್ತಲಿಬ್ಯಾಡ
> ಬಣ್ಣದ ಮಾತ ಹೇಳಬ್ಯಾಡ। ಎಲೆಹುಡುಗ
> ಮಣ್ಣ ಹೊರಸೇನು ಮನಿಗ್ಹೋಗ.

ಈ ನುಡಿಯಲ್ಲಿ ಅದರರ್ಥ ಸ್ಪಷ್ಟವಾಗುತ್ತದೆ. ಕೊಡ ಒಡೆಯು ವದು ಅಶುಭ ಸಂಕೇತ.

> ಗೆಣೆಯ ಸತ್ತ ಸುದ್ದಿ ಹೊಳೆಯ ಆಚೀಲೆ ಕೇಳಿ
> ಹೊತ್ತಂತ ಕೊಡ ಒಗವಾಳ ಆ ಬಾಲೆ। ತೊಟ್ಟಂಥ
> ಕುಬಸ ಹರದಾಳ

ಇಲ್ಲಿ 'ಕೊಡ ಒಡೆಯುವದು' 'ಕುಬುಸ ಹರಿಯುವದು' ಗೆಣೆಯ ಸತ್ತನೆಂದು ತಿಳಿಯುವ ಸಂಕೇತಗಳು. 'ಚಿನ್ನದ ಕೊಡವಲ್ಲ

ರನ್ನದ ಕೊಡವಲ್ಲ ಮಣ್ಣಿನ ಕೊಡಕ್ಯಾಕಿಷ್ಟು ಅಳತೀಯೆ?' ಎಂದು ಯಾರಾದರೂ ಕೇಳಿದರೆ ಸಂಕೇತಪೂರ್ಣವಾಗಿ ಕೊಡುವ ಆಕೆಯ ನುಡಿ ಅರ್ಥಪೂರ್ಣವಾದುದು.

ಅತ್ತೆ ಕಾಣದ್ಹಾಗೆ ಮಾವನೋಡದ್ಹಾಗೆ
ಒಪ್ಪದಲಿ ನಾನು ಬಳಸಿದಂಥ। ಹರವಿ
ನುಚ್ಚಾಯ್ತು ನೀರ ಹೊಳೆಯಾಗೆ

ಹಳ್ಳಿಗಳಲ್ಲಿ ನಡೆಯುವ ವ್ಯಾಪಾರಗಳಲ್ಲಿ ಇಂದಿಗೂ ಕೂಡ ಈ ಸಂಕೇತಗಳ ಬಳಕೆ ಕಂಡು ಬರುತ್ತದೆ.

ಸೀರೆ ಕುಬುಸ ಮಾರಲು ಬಂದ ಸಾಬಣ್ಣನಿಗೆ ಹಳ್ಳಿಯಲ್ಲಿಯ ತುಂಬಿನಿಂತ ಹೆಣ್ಣನ್ನು ಕಂಡಾಗ ಬಾಯಲ್ಲಿ ನೀರು ಬರುತ್ತವೆ. ಹೇಗಾದರೂ ಮಾಡಿ ಆಕೆಯೊಡನೆ ವ್ಯಾಪಾರ ಮಾಡಬೇಕೆಂದು ಇಚ್ಛಿಸುತ್ತಾನೆ. ಮುಗ್ಧ ಹುಡುಗಿ ಅವನು ಮಾರಾಟಕ್ಕೆ ತಂದಂತಹ ಸೀರೆ ಕುಬುಸಗಳನ್ನು ಹುರುಟಿನಿಂದ ನೋಡುತ್ತಿರುವಾಗ ಸಾಬಣ್ಣನ ಕಣ್ಣೆಲ್ಲಾ ಅವಳುಟ್ಟ ಸೀರೆ ಕುಬುಸದ ಮೇಲಿರುತ್ತದೆ. ಆಕೆಯನ್ನು ನೋಡಿ ನೋಡಿ ಜೊಲ್ಲು ಸುರಿಸಹತ್ತಿದ ಮೇಲೆ 'ಬಾಳ ದುಬಾರಿಯಾತಪಾ ಸಾಬಣ್ಣ' ಎಂದು ಆಕೆ ಹೊರಟು ನಿಂತಾಗ ಜುಣೇ ಬೋಣ್ಗಿ ನಿಂದ್ರ ಆಗ್ಲಿ ಬಾರವ್ವಾ, ಕುಬುಸದಾಗ ಎಲ್ಡ ಹಿಡಿತೀನಿ ಸಿರ್ಯಾಗೊಂದು ಬಿಡತೀನಿ' ಎನ್ನುತ್ತಾನೆ. ಈ ಸಾಬಣ್ಣನ ಹಿಡಿಯುವಿಕೆ-ಬಿಡುವಿಕೆ ಬೇಕಾದ ಹುಡುಗಿ ವ್ಯಾಪಾರ ಮುಗಿಸಿ ಕೊಳ್ಳುತ್ತಾಳೆ. ಬೇಡಾದವಳು ದುರದುರನೇ ನೋಡಿ ಹೊರಟು ಹೋಗುತ್ತಾಳೆ.

ಒಟ್ಟಿನಲ್ಲಿ ಹೇಳಬೇಕಾದರೆ ಜನಪದ ಕಾವ್ಯದಲ್ಲಿ ಪ್ರಣಯ ಸಂಕೇತಗಳು ಬಹಳ ಅರ್ಥವತ್ತಾಗಿ ಬಳಕೆಯಾಗಿವೆ. ಜನಪದರು

ಯಾವುದೇ ವಿಶ್ವವಿದ್ಯಾಲಯದ ಪದವಿ ಪಡೆದವರಲ್ಲ, ಹಾಗೂ ವೇದ–ಶಾಸ್ತ್ರಗಳನ್ನು ತಿಳಿದ ಪಂಡಿತರಲ್ಲ, ಆದರೂ ಅವರು ಸಮಯೋಚಿತವಾಗಿ ಬಳಸುವ ಸಂಕೇತಗಳು ಅರ್ಥವತ್ತಾದವುಗಳು. ಗಟ್ಟಿತನದ ಭಾಷೆ ಕಿರಿಯ ನುಡಿಯಲ್ಲಿಯೇ ಹಿರಿಯ ಅರ್ಥಹೊತ್ತು ನಿಂತ ತ್ರಿಪದಿಗಳು, ಬೆಡಗು ಬಿನ್ನಾಣಗಳಿಲ್ಲದೆ ಬಿಚ್ಚು ಹೃದಯ ದಿಂದರಳಿದ ಅನುಭವದ ಹೂಗಳು ಘಮ–ಘಮಿಸಿ ಓದುಗನಿಗೆ ಆತ್ಮಾನಂದವನ್ನುಂಟು ಮಾಡುತ್ತವೆ. ಅತ್ಯಂತ ಸಹಜತೆಯಿಂದ ಬಿತ್ತರಿಸಿ ಬಂದ ಅವರ ಒಂದೊಂದು ನುಡಿಗಳೂ ಜೇನುರಸದ ತೊನೆಗಳು. ಚೀಪಿದಷ್ಟೂ ಸಿಹಿ, ತಿಂದಷ್ಟೂ ರುಚಿ, ಅರ್ಥೈಸು ವಾಗಂತೂ ಖುಷಿಯೇ ಖುಷಿ.

೩. ಪ್ರಣಯದ ತಾಣಗಳು

ಪ್ರಣಯಿಗಳಿಗೆ ಪ್ರೇಮರಸವನ್ನುಣ್ಣಿಸುವ ಸ್ಥಳಗಳ ಅವಶ್ಯ-ಕತೆ ಅತ್ಯಂತ ಪ್ರಾಮುಖ್ಯವಾದುದು. ಹರೆಯಕ್ಕೆ ಬಂದ ಗೆಳೆಯಾ–ಗೆಳತಿಯರು ಪ್ರೇಮಿಸಿ ಕೂಡಬೇಕೆಂದಾಗ ಸ್ಥಳಗಳ ಆಯ್ಕೆ ಮಾಡುತ್ತಾರೆ. ಆದರೆ ಮದುವೆಯಾದ ದಂಪತಿಗಳಿಗೆ ಇದರ ಸಮಸ್ಯೆ ಏನೂ ಬರುವದಿಲ್ಲ. ಸಮಾಜದ ದೃಷ್ಟಿಯಲ್ಲಿ ಸತಿ–ಪತಿ ಗಳಾದ ಅವರು ಹಾಯಾಗಿ ತಮ್ಮ ತಮ್ಮ ಮನೆಗಳಲ್ಲೇ ತಮಗೆ ಬೇಕಾದಾಗ ಪ್ರೇಮದ ತನಿರಸವನ್ನುಣ್ಣುತ್ತಾರೆ. ಆದರೆ ಇನ್ನೂ ಮದುವೆಯಾಗದ ಪ್ರಣಯಿಗಳಿಗೆ, ಗಂಡನನ್ನು ಬಿಟ್ಟು ಇನ್ನೊಬ್ಬ ನನ್ನು ಕೂಡುವ ಹೆಂಗಸಿಗೆ, ಹೆಂಡತಿಯನ್ನು ಬಿಟ್ಟು ಮತ್ತೊಬ್ಬ ಳನ್ನು ಹಿಂಬಾಲಿಸುವ ಗಂಡಿಗೆ ಈ ಸ್ಥಳಗಳ ಏರ್ಪಾಡು ಅತ್ಯಂತ ಮಹತ್ವದ್ದು. ಇಂತಹ ಪ್ರಣಯಿಗಳು ಹಳ್ಳದ ದಂಡೆ, ಕೆರೆಯ ದಂಡೆ

ಬಾವಿಯದಂಡೆ, ಇಚ್ಚಲಪೊದಿ, ಬೆಳೆದುನಿಂತ ಬಿಳಿಜ್ವಾಳದಹೊಲ ಎಲಿತ್ವಾಟ, ಒಳಗಟ್ಟಿದಂಡಿ, ಹಿತ್ತಿಲಜಾಗ, ಕಳ್ಳಸಾಲು, ಹಾಳಬಿದ್ದ ದೇವಸ್ಥಾನ, ಹರಕ ಜೋಪಡಿ, ಮಡೆ ಹೊಲ, ಹಾಗೂ ಜಾತ್ರೆ ನಿಬ್ಬಣ, ಸಂತೆ, ಉರುಸು, ಬಯಲಾಟ, ಯಕ್ಷಗಾನ ಮೊದಲಾದವು ನಡೆದ ಸ್ಥಳಗಳಲ್ಲಿ ತಮ್ಮ ಪ್ರಣಯ ಸಲ್ಲಾಪಗಳನ್ನು ಚೆಲ್ಲಾಡುತ್ತಾರೆ. ಹರೆಯದ ಮಬ್ಬಿನಲ್ಲಿರುವ ಅವರಿಗೆ ಅಂತಹ ಸಮಯದಲ್ಲಿ ಒಬ್ಬರೊಬ್ಬರು ಕೂಡುವದೆಂದರೆ ಸ್ವರ್ಗ ಏರಿ ದಂತೆಯೇ. ಮಿಲನಕ್ಕಾಗಿ ಇಬ್ಬರೂ ಕಾತುರರಾಗಿರುತ್ತಾರೆ. ಮನೆ ಯಲ್ಲಿಯ ತಂದೆ-ತಾಯಿಗಳಿಗೆ ತಿಳಿಯದ ಹಾಗೆ, ಗುರು-ಹಿರಿ ಯರಿಗೆ ಗೊತ್ತಾಗದ ಹಾಗೆ, ತಮ್ಮ ಗಂಡ-ಹೆಂಡತಿಯರಿಗ ಕಣ್ಣಕಟ್ಟುಮಾಡಿ ಈ ಪ್ರಣಯಿಗಳು ತಮ್ಮದೇ ಆದ ಸುಖದಲ್ಲಿ ತೇಲಾಡುತ್ತಿರುತ್ತಾರೆ.

ಚಿಕ್ಕೋಡಿ ಹಳದಾಗ ಚಿಪ್ಪುಗಲ್ಲಿನ ಮ್ಯಾಲ
ಚಿಕಿ ಚಿಕಿ ಕುಬಸಾ ಒಗಿಯುವಳೊ ।
ಬಾಲಿಯ ಕಂಡು
ಊಟ ಮಾಡೂದ ಮರತೇನೊ

ಎನ್ನುತ್ತಾನೆ ಹುಡುಗ. ಊರ ಹೊರಗೆ ಹರಿಯುತ್ತಿರುವ ಹಳ್ಳ ದಲ್ಲಿ ಬಟ್ಟೆ ತೊಳೆಯಲು ಬಂದ ಹುಡುಗಿಯನ್ನು ಕಂಡು ಮಂಕಾಗು ತ್ತಾನೆ, ಊಟವನ್ನು ಮರೆಯುತ್ತಾನೆ. ಆಕೆಯನ್ನೇ ನೋಡುತ್ತ ದಂಡೆಯಮೇಲೆ ಕೂಡ್ರುತ್ತಾನೆ. ಇದೇ ರೀತಿ;

ಕೆಂಬಾವಿ ಕೆರಿಮ್ಯಾಲ ಡಂಬೂತಿ ಆಡುವಳು
ನೋಡಿ ಬಂದ ಹುಡುಗ ಉಣುವಲ್ಲ । ಡಂಬುತಿ
ಮುತ್ತಿನ ಸೆರಗ ಮರಿಮಾಡೊ

ತುಂಬಿನಿಂತ ಆಕೆಯ ಮೈ-ಕೈಮಾಟ ಸೆರಗಿನಿಂದ ಹೊರಚಾಚಿ ಮಿಂಚಿದಾಗ ಹುಡುಗ ತತ್ತರಿಸಿ ಹೋಗುತ್ತಾನೆ.ಆಗ ಆತ ಊಟ ವನ್ನಷ್ಟೇ ಏಕೆ ಎಲ್ಲವನ್ನೂ ಮರೆಯುತ್ತಾನೆ.

ಬೆಳ್ಳಿಯ ಬಳಿಯಾಕಿ ನೀಯೇನ ಒಳ್ಯಾಕಿ
ಕಳ್ಯಾಗ ನಿಂತ ಕರಿಯಾಕಿ ! ಆ ಬಾಲಿ
ಮುಳ್ಯಾಗ ನೂಕಿ ನಗುವಾಕಿ
ಹೊರಕಡಿಗಿ ಹೋಗವಳ ಮುರಕೇನ ಹೇಳಲಿ
ಎರಕದ ಚರಿಗಿ ಎಡಗೈಯ | ಒಡಕೊಂಡು
ಕರಕಂತ ಮೂಗ ಮಾರದಾಳ.

ಇಲ್ಲಿ ಬಂದಿರುವ ಕಳ್ಳೀಸಾಲು, ಹೊರಕಡಿಗಿ ಹೋಗೋ ಜಾಗಾ ಇವು ಪ್ರಣಯ ನಡೆವ ಸ್ಥಳಗಳು. ಅದೆಲ್ಲಾ ಆಕೆಯ ಗುಣವನ್ನು ಕಂಡಿದ್ದರೂ ಹುಡುಗ ಆಕೆಯನ್ನು ಬಿಡಲು ಮಾತ್ರ ಸಿದ್ಧನಿಲ್ಲ. ಮುಳ್ಯಾಗ ಆಕೆ ನೂಕಿದರೂ ಮತ್ತೆ ಆಕೆಯನ್ನೇ ಕೂಡೇನೆನ್ನು ತ್ತಾನೆ. ಆಕೆಯೊಡನೆ ಚಕ್ಕಂದವಾಡಿದ ಸ್ಥಳವನ್ನಂತೂ ಆತ ಎಂದಿಗೂ ಮರೆಯಲಾರ.

ಆ ವರುಷ ಹಾಂಗಾಯ್ತು, ಈ ವರುಷ ಹೀಂಗಾಯ್ತು
ಲಂಡಕ್ಯಾನ್ಹಳ್ಳದಾಗ ಕೆಲಸಾಯ್ತೊ । ಗುಂಡಕನಾಳ
ಹಸುರಂಗಿ ಹುಡಗ ಹೆಸರಾಯ್ತೊ

ಎಂದು ಲಂಡಕ್ಯಾನ್ಹಳ್ಳವನ್ನು ಮತ್ತೆ - ಮತ್ತೆ ನೆನಸುತ್ತಾನೆ. ಹೀಗೆ ಕೂಡಿದ ಗೆಣೆಯನನ್ನು ರಮಿಸುತ್ತಾ ಆಕೆ ಹತ್ತಿಯ ಹೊಲ ದಲ್ಲಿ ತನ್ನ ಬೇಡಿಕೆಗಾಗಿ ಅತ್ತು ಹೇಳುವ ಪ್ರಸಂಗವೂ ಉಂಟು.

ಹತ್ತೀಯ ಹೊಲದಾಗ ಅತ್ತತ್ತ ಹೇಳ್ಯಾಳ
ನತ್ತ ಮಾಡಿಸ್ಯ ನನಗೊಂದು | ಎನಗೆಣೆಯ
ಅತ್ತಿಮನಿಗೋಗಿ ಬರತೇನೊ

ಹೀಗೆ ಪ್ರಣಯಿಗಳಿಗೆ ತಮ್ಮ ಬೇಕು – ಬೇಡಿಕೆಗಳನ್ನು ಈಡೇರಿಸಿ ಕೊಳ್ಳಲು ನಿರ್ಜನವಾದ ಪ್ರದೇಶಗಳು ಒಳ್ಳೆಯ ಆಸರೆಯನ್ನು ಕೊಡುತ್ತವೆ.

ಇನ್ನು ತಳವಾರ ಹುಡಗಿಯನ್ನು ಪ್ರೀತಿಸಿದ ಹುಡುಗ ಆಕೆ ನೀರಿಗೊಯ್ಯೋದ ಸ್ಥಳದಲ್ಲಿ ಉಣಿಸಿದರೂ ಸಂತೋಷದಿಂದ ಊಟಮಾಡುತ್ತಾನೆ.

ತಳವಾರ ಪೋರಿದು ತಾರಿಪೇಸ್ಟೋಳಲಿ
ಗಾರಿಗೆ ಮಾಡಿ ಕೊಡ ತುಂಬಿ । ಆ ಬಾಲಿ
ನೀರಿಗೆ ಹೋದಲ್ಲಿ ಉಣಸ್ಯಾಳ

ಈ ರೀತಿ ಪ್ರಣಯಿಗಳು ಸರಸಾಟದ ಸ್ಥಳಗಳನ್ನು ನೆನಸಿಕೊಳ್ಳುತ್ತಾರೆ.

ಆಡ ಕಾಯೋಣು ಬಾರ ಕೂಡಿ ಮಲಗ್ಯೂಣ ಬಾರ
ಅಜ್ಜ ಕ್ಯಾದಿಗಿ ಬನದಾಗ| ಆಡಿದ ಮಾತು
ಎಚ್ಚರಿಲ್ಲೇನ ಎದಿಯಾಗ
ಗೆಣೆಯಾ ಬರತಾನಂತ ಹೊರಗ ಮಲಗೀರತೀನಿ
ಕರು ಹೋಗ್ಯಾದಂತ ಬಂದ್ಹೋಗೊ। ಓ ಗೆಣೆಯಾ
ಕರುವೀನ ಸೇಡು ತೆಗೆದ್ಹೋಗೊ

ಎನ್ನುವಲ್ಲಿ ಈ ಪರಸ್ಪರರು ತಾವು ಕೂಡ ಬೇಕೆಂದಿದ್ದ ಸ್ಥಳಗಳನ್ನು ಮೊದಲೇ ನಿರ್ಧರಿಸಿರುತ್ತಾರೆ. ಹಾಗೆ ನಿರ್ಧರಿಸಲ್ಪಟ್ಟ ಸ್ಥಳಗಳಲ್ಲಿ ಕೂಡಲು ಅವರೆಂದೂ ತಪ್ಪಿಸುವದಿಲ್ಲ.

ಊರ ಹೊರಗಿರುವ ಅಗಸೀ ಬಾಗಿಲದಲ್ಲೂ ಕೂಡ ಪ್ರಣಯಿಗಳು ಪ್ರೀತಿಯ ಮಾತನಾಡುತ್ತಿರುತ್ತಾರೆ. ತನ್ನ ಗೆಣೆಯಾ ಅಗಸೀ ಬಾಗಿಲದಲ್ಲಿ ಎದುರಿಗೆ ಬಂದಾಗ ಎಂತಹ ಅನುಭವ ವಾಗುತ್ತಿದೆ ಎಂಬುದನ್ನು ಒಬ್ಬಾಕೆ ಈ ರೀತಿ ಹೇಳಿಕೊಳ್ಳುತ್ತಾಳೆ.

ಎತ್ತ ಕಾಯ್ತ್ವ ಜಾಣ ಮುತ್ತೀನ ತುರಾಯಿ
ಅಗಸ್ಯಾಗ ಗೆಣೆಯ ಎದುರಾದೊ। ಬರುವಾಗ
ಸಿಗಸಿದ ನಿರಿಗಿ ಸಡಿಲಾಗಿ

ತನ್ನ ಗೆಳೆಯನನ್ನು ಕಂಡ ಕೂಡಲೇ ಆಕೆಯ ಸಿಗಸಿದ ನಿರಿಗಿ ಸಡಿಲಾಗ ಬೇಕಾದರೆ ಅವರ ಆಕರ್ಷಣೆ ಆಕಾಂಕ್ಷೆ ಹೇಗಿರುತ್ತದೆಂಬುದು ನಿಚ್ಚಳವಾಗಿ ಕಂಡುಬರುತ್ತದೆ.

ದಟ್ಟವಾದ ಕಣಿವೆಯಂತಹ ಸ್ಥಳಗಳಲ್ಲಿ ಹಾಯ್ದು ಬರುವಾಗ ಪ್ರಣಯದಾಟದ ಮೋಜು ವರ್ಣರಂಜಿತವಾದುದು.

ಕಗ್ಗಲ್ಲ ಕಣಿವೇಲಿ ಇಬ್ಬರು ಬರುವಾಗ
ತಬ್ಬಿದರೇನಾಗೋದೆ। ಎಲೆನಾರಿ
ಒತ್ತಿದರೇನಾಗೋದೇ?

ಎಂದು ಕೇಳುವ ಆತನ ಮಾತಿನಲ್ಲಿ ಅದೆಂತಹ ರಸಿಕತೆಯಡಗಿದೆ. ಹೆಣ್ಣನ್ನು ತಬ್ಬಿಕೊಂಡಾಗ ಒತ್ತಿಕೊಂಡಾಗ ಸಿಗುವ ಸ್ವರ್ಗ-ಸುಖ ಸುಖ ಅಂತೆಯೇ ಆ ಹುಡುಗ ಸಮಯ ಸಾಧಿಸಿ ಆಳವಾದ ಕಣಿವೆಯ ನಿರ್ಜನ ಸ್ಥಳವನ್ನು ನೋಡಿ ಗಪ್ಪನೇ ಆಕೆಯನ್ನು ತಬ್ಬಿಕೊಳ್ಳುತ್ತಾನೆ. ಹೀಗೆ ಊರಿನಿಂದ ದೂರವಿರುವ ಆಳವಾದ ಕಣಿವೆಯ ಸ್ಥಳ ಅವರೀರ್ವರಿಗೂ ಸ್ವರ್ಗ ಸುಖಕೊಡುತ್ತದೆ.

ಎಲ್ಲವ್ವ ಗುಡದಾಗ ಎಲ್ಲಿದ್ಯೊ ನನ ಗೆಣೆಯಾ
ಕಲ್ಲಿನಂತಾವ ಕರಿಗಡಬ । ಕಟಕೊಂಡ
ಎಲ್ಲವ್ವ ಗುಡ್ದೆಲ್ಲ ಹುಡಕೇನಿ

ಉಪ್ಪಾರ ಹುಡಗೀಯ ಉಪದ್ರೇನ ಹೇಳಲಿ
ತುಪ್ಪದ ಕುಳ್ಳಿ ಕಿಪದ್ಯಾಗ । ಇಟಗೊಂಡು
ತಿಪ್ಪೀ ಮರಿಗ್ಹೋಗಿ ಕುಡಿಸ್ಯಾಳ

ಪತ್ರ್ಯಾಲಿ ಉಡವೊಳ, ಹಿತ್ಲಾಗ ನಿಂದರೊಳ
ನತ್ತ, ನಲಿ ನಲಿಗ್ನಿ ನಗವೊಳ । ಹುಡಗಿ ಕಂಡ
ಹಿತ್ತ್ಯಾಲಿ ಗ್ವಾಡಿ ಜಿಗದಾನ

ಇಲ್ಲಿ ಬರುವ ಎಲ್ಲವ್ವನ ಗುಡ್ಡ, ತಿಪ್ಪೀಮರಿಯಲ್ಲಿಯ ಸ್ಥಳ, ಹಿತ್ತಲ ಜಾಗ ಇವು ಪ್ರೇಮರಸವನ್ನುಣಿಸುವ ಪ್ರಣಯಿಗಳ ಸೋಪಾನಗಳು. ತನ್ನ ಪ್ರೇಯಸಿಯ ನಲಿ-ನಗುವ ನತ್ತಿಗೆ ಮರುಳಾಗಿ ಹಿತ್ತಲ ಜಿಗಿಯುವವನಿಗೆ :

ಹಿತ್ತಲ ಜಿಗಿಬ್ಯಾಡ, ಕೈಮುಂಡಿ ಮುರದಾವ
ಸುತ್ತಾದ ಬಾರೊ ಸುಬೆದಾರ । ನನ್ಹೊರತು
ಮತ್ತಾರು ಇಲ್ಲ ಮನೆಯಾಗ

ಕೈ ಮುರಿದೀತೆಂದು ತಿಳಿದ ಹುಡುಗಿ ಯಾರೂ ಇಲ್ಲದ ತನ್ನ ಮನೆಗೆ ತನ್ನ ಗೆಣೆಯನನ್ನು ನೇರವಾಗಿ ಆಹ್ವಾನಿಸುತ್ತಾಳೆ. ಹಳ್ಳಿಗರ ಮನಸ್ಸು ಅತ್ಯಂತ ಪರಿಶುದ್ಧವಾದುದು. ಯಾವುದೇ ವಿಷಯ ವಿರಲಿ ಇದ್ದುದನ್ನು ಇದ್ದ ಹಾಗೇ ತೋಡಿಕೊಳ್ಳುವ ಅವರ ವಾಸ್ತವ ಪ್ರಜ್ಞೆ ಯಾರಿಗೂ ಬಾರದು.

ಆ ವರ್ಷ ಹಾಂಗಾತ, ಈ ವರ್ಷ ಹೀಂಗಾತ
ಕ್ಯಾದಗೀ ಬನದಾಗ ಕೆಲಸಾತ । ಹುಡುಗಿ ನಿನ್ನ
ಹುಬ್ಬೀನ ಸೀರಿ ಹೊಲಸಾತ

ಎನ್ನುವಲ್ಲಿ ದಟ್ಟವಾದ ವಾಸ್ತವತೆಯ ಪರಿಜ್ಞಾನ ಯಾರಿಗಾದರೂ ಮನದಟ್ಟಾಗದೇಯಿರದು.

ಹೀಗೆ ಗುಪ್ತವಾಗಿ ನಡೆದ ಪ್ರಣಯ ಹಾಗು ನಡೆದ ಸ್ಥಳಗಳು ಗೊತ್ತಾಗದೇ ಹೋಗುವದಿಲ್ಲ. ಹಾಗೆ ಗೊತ್ತಾದಾಗ ಅವರು ಫಜೀತಿಗಿಟ್ಟು ಕೊಳ್ಳುತ್ತಾರೆ. ಸಮಾಜಕ್ಕೆ, ತಂದೆ ತಾಯಿಗಳಿಗೆ ಗೌರವಕೊಟ್ಟು ಮದುವೆಯಾದರೆ ಅವರ ಬಾಳು ನಂದನವನವಾಗುತ್ತದೆ; ಕೆಲದಿನ ಬಿಟ್ಟು ಮತ್ತೆ ಅದನ್ನೇ ಮುಂದುವರಿಸಿದರೆ ಅವರ ಬದುಕೆಲ್ಲಾ ನಿರರ್ಥಕ. ಕೂಡಿದಾಗಿನ ಪ್ರೇಮ ಕಡೆಯತನಕ ಉಳಿಯದಿದ್ದರೆ, ವಿರಸ ಹುಟ್ಟಿ ಒಬ್ಬರನ್ನೊಬ್ಬರು ದೂರ ಮಾಡಿಕೊಂಡರೆ ಅಂತವರ ಬಾಳು ನಾಯಿ ಬಾಳಿಗಿಂತಲೂ ಕಡೆಯಾಗುತ್ತದೆ.

ಹೀಗೆ ಅನೇಕ ಸ್ಥಳಗಳು ಪ್ರಣಯಿಗಳ ಮಿಲನಕ್ಕೆ ಮಾತುಕತೆಗೆ ಬಹಳ ಸಹಾಯಕವಾಗಿರುತ್ತವೆ.

೪. ಪ್ರಣಯ ಚೇಷ್ಟೆಗಳು

ಚೇಷ್ಟೆ-ಹುಡುಗಾಟ ಪ್ರಣಯದ ಪ್ರಾರಂಭದ ಮೆಟ್ಟಿಲುಗಳು. ಸ್ನೇಹದಿಂದ ಸಲಿಗೆ, ಸಲಿಗೆಯಿಂದ ಹುಡುಗಾಟ, ಹುಡುಗಾಟಿಕೆಯಿಂದ ಚೇಷ್ಟೆ, ಅಲ್ಲಿಂದ ಪ್ರಣಯ. ಹೀಗೆ ಹಂತ-ಹಂತವಾಗಿ ಏರುವ ಪ್ರಣಯದ ಪಾರಕ್ಕೆ ಚೇಷ್ಟೆಗಳ ಕಾರ್ಯ ಬಹು ಮುಖ್ಯ.

ಹುಡುಗ ಹುಡುಗಿಯರ ಮಿಲನವಾಗಬೇಕಾದರೆ ಇಬ್ಬರ ನೋಟವೂ ಒಂದೇ ಆಗಿರಬೇಕಾಗುತ್ತದೆ. ಎದುರು ಮನೆಯಲ್ಲಿಯ ಹರೆಯದ ಚಲುವೆಯ ಮೇಲೆ ಹುಡುಗನ ಮನಸ್ಸು ಕುಂತಿತೆಂದರೆ

ಆತ ದಿನಾಲೂ ಕಿಡಿಕಿಯಿಂದ ಆಕೆಯನ್ನು ನೋಡುತ್ತ ಕೂಡ್ರುತ್ತಾನೆ. ಗಟ್ಟಿಮುಟ್ಟಾದ ಹುಡುಗನನ್ನು ಕಂಡ ಆಕೆಗೂ ಮೈ ಅರಳುತ್ತದೆ ಮನ ಬಿಚ್ಚುತ್ತದೆ. ತಕ್ಷಣವೇ ಮಂದಹಾಸ ಬೀರುತ್ತಾಳೆ; ಕಿರುನಗೆ ನಗುತ್ತಾಳೆ. ಆಗ ಹುಡುಗ ಖುಷಿಗೊಂಡು ತನ್ನ ಎರಡನೆಯ ಪ್ರಯೋಗವನ್ನು ಪ್ರಾರಂಭಿಸಿಯೇ ಬಿಡುತ್ತಾನೆ. ಮರುದಿನ ತಮ್ಮ ಹಿತ್ತಲದಲ್ಲಿ ಹೂ ಹರೆಯಲು ಬಂದ ಆಕೆಯನ್ನು ನೋಡಿದ ಹುಡುಗ ಯಾರ ಸುಳಿವೂ ಇಲ್ಲದ್ದನ್ನು ಕಂಡು ಗಪ್ಪನೇ ಕೈ ಹಿಡಿಯುತ್ತಾನೆ. ಇದು ಆತನಿಗೆ ಸಿಕ್ಕ ಮೊಟ್ಟ ಮೊದಲಿನೆಯ ಸ್ಪರ್ಶಸುಖ. ಮೃದುವಾದ ಅವಳ ಕೈಯನ್ನು ಹಿಸುಕಿದಾಗ ಎಂದೂ ಅನುಭವಿಸದ ಆನಂದವುಂಟಾಗುತ್ತದೆ. ಆಕೆಗೂ ಅಷ್ಟೇ ಹಿತ; ಹಿಡಿದ ಕೈ ಹಾಗೇ ಇರಲೆಂದು ಇಚ್ಛಿಸುತ್ತಾಳೆ.

ಹೀಗೆ ದಿನಗಳೆದಂತೆಲ್ಲಾ ಅವರ ಚೇಷ್ಟೆಗಳು ಚಿಟ್ಟೆಗಳಾಗಿ ಹಾರಾಡುತ್ತವೆ. ಸೆರಗ್ಹಿಡಿದು ಎಳೆಯುವದು, ನೀಳವಾದ ಕೇಶರಾಶಿ ಹಿಡಿದು ಜಗ್ಗುವದು. ಉಬ್ಬಿದ ಸ್ತನಗಳ ಮುಂಭಾಗ ಮುಟ್ಟುವದು ಗಲ್ಲ ಕಡಿಯುವದು ಹೀಗೆ ಹೆಣ್ಣಿಗೆ ಗಂಡು ಚೇಷ್ಟೆ ಮಾಡಿದರೆ, ಗಂಡಿಗೆ ಹೆಣ್ಣು ಕೂಡ ಹಾಗೇ ಬಿಡುವದಿಲ್ಲ. ಸುತ್ತ ಮುತ್ತ ನೋಡಿ ಆತನ ಕಿವಿಹಿಡಿದು ಮೇಲಕ್ಕೆತ್ತುತ್ತಾಳೆ, ತೊಡೆಗೆ ಗುದ್ದಿ ನೋಡುತ್ತಾಳೆ, ಮೀಸಿ ಜಗ್ಗಿ ಆಡಿಸುತ್ತಾಳೆ, ಪಕ್ಕಡಿಗೆ ಚಿವುಟಿ ಕೇಳುತ್ತಾಳೆ. ಹೀಗೆ ಹಲವಾರು ರೀತಿಯ ಚೇಷ್ಟೆಗಳನ್ನು ಹೆಣ್ಣು ಮಾಡುವದುಂಟು. ಆದರೆ ಎಷ್ಟೇ ಆದರೂ ಹೆಣ್ಣು ನಾಚಿಕೆ ಸ್ವಭಾವದವಳು ಹೀಗಾಗಿ ಮೊದಲು ಮುನ್ನುಗಿ ಚೇಷ್ಟೆಗೆ ಪ್ರಾರಂಭಿಸುವವನು ಗಂಡೇ ಎಂದು ಹೇಳಬಹುದು.

ಆತ ಚೇಷ್ಟೆ ಮಾಡುವಾಗಲೆಲ್ಲಾ ಆಕೆಗೆ ಹಿತ. ಮೇಲು ನೋಟಕ್ಕೆ ಆಕೆ ಸಿಟ್ಟಿಗೆ ಬಂದಂತೆ ತೋರಿದರೂ ಒಳಗಿನ ಮನಸ್ಸು ಮಾತ್ರ ಅದನ್ನು ಹಾಗೇ ಮುಂದುವರಿಸು ಎನ್ನುತ್ತಿರುತ್ತದೆ.

ಯಾರೂ ಇಲ್ಲದ ನಿರ್ಜನ ಪ್ರದೇಶಗಳಲ್ಲಂತೂ ಪ್ರಣಯಿಗಳ ಚೇಷ್ಟೆಗಳು ಮನಬಿಚ್ಚಿ ಹಾರಾಡುತ್ತವೆ.

ಕಡಿದಾದ ಕಲ್ಲಿನಲ್ಲಿರುವ ಆಳವಾದ ಕಣಿವೆಯಲ್ಲಿ ಹೊರಟಿರುವ ಈ ಪ್ರಣಯಿಗಳ ಸ್ವಚ್ಛಂಧ ಚೇಷ್ಟೆ ನೋಡುವಂತಹದು. ಇಲ್ಲಿ ಯಾವುದೇ ಕೃತಿಮತೆಯಿಲ್ಲ, ಕಲ್ಪಕತೆಯಿಲ್ಲ; ತೆರೆದಿಟ್ಟ ಪುಸ್ತಕದಂತೆ. ಕೊರೆದಿಟ್ಟ ಶಾಸನದಂತೆ ಸ್ಪಷ್ಟ ಹಾಗೂ ಶಾಶ್ವತ.

ತಬ್ಬುವ, ಮುತ್ತುವ ಇಚ್ಛೆಯನ್ನು ಆತ ಬಾಯಿಬಿಟ್ಟು ಕೇಳುವದು ವಾಸ್ತವತೆಯ ಕುರುಹು. ಇಂತಹ ಎಷ್ಟೋ ಚೇಷ್ಟೆಗಳು ನಮ್ಮ ಜನಪದದ ಜೀವನದಲ್ಲಿ ಹಾಸು ಹೊಕ್ಕಾಗಿವೆ.

ಗೆಣತಿಯನ್ನು ತಬ್ಬಿ ಒತ್ತಿ ರುಚಿಕಂಡ ಗೆಣೆಯ ಆಕೆಯ ಹಣಚಿಬಟ್ಟಿನ ಕೈಯನ್ನು ಒತ್ತಿ ಬಿಗಿಯಾಗಿ ಹಿಡಿಯುತ್ತಾನೆ. ಆಗ ಆಕೆಗೆ ತನ್ನ ಅತ್ತೆಯ ನೆನಪು ಬಂದು;

> ಹಣಚಿಬಟ್ಟಿನ ಕೈಯ ಒತ್ತಿ ಹಿಡಿಯಲು ಬ್ಯಾಡ
> ನೆತ್ತರಿಳಿದಾವು ಬೆರಳೀಗೆ। ನನ ಗೆಣೆಯಾ
> ಅತ್ತಿ ಬೈದಾಳು ಕೈ ಬಿಡೊ

ಕೆಂಪಾದ ಕೈಯನ್ನು ನೋಡಿದ ಅತ್ತೆ ಇದೇನೆಂದು ಕೇಳಿದರ ಪಾಪ ಆಕೆ ಏನು ಹೇಳಿಯಾಳು! ಅದಕ್ಕೆ ಮೊದಲೆ ತನ್ನ ಗೆಣೆಯನಿಗೆ ಹೇಳಿ ಕೈಬಿಡಿಸಿಕೊಳ್ಳಬೇಕೆಂದರೆ ಕೈಗೆ ಸಿಕ್ಕ ಹುಡುಗಿಯನ್ನು

ಆತ ಅಷ್ಟು ಸುಲಭವಾಗಿ ಅದ್ಹೇಗೆ ಬಿಟ್ಟಾನು! ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಮತ್ತೆ ಚೇಷ್ಟೆಗೆರೆಯುತ್ತಾನೆ. ಒಮ್ಮಿಂದೊಮ್ಮೆಲೇ ಆಕೆಯ ಮುಲಿಕಟ್ಟಿಗೆ ಕೈಹಾಕುತ್ತಾನೆ.

ಹಚ್ಚೆನ ಹಣಿಯಬಟ್ಟು ಚಿನ್ನದ ಮಲಿ ಕಟ್ಟಿ
ಚೊಟುಬೇಡ ಗೆಣೆಯ ರಗುತಾವೊ।ಮನಿಯೂನ
ಅತ್ತಿ ಬೇಯ್ತಾಳ ಕೈಯಬಿಡೊ

ಸೂಕ್ಷ್ಮವಾದ ಸ್ಥಳಗಳಲ್ಲಿ ಚಿವುಟಿದರೆ, ಉಗುರು ತಾಗಿ ಗಾಯವಾಗಿ ರಕ್ತ ಬಂದರೆ ಆಕೆಯ ಗತಿಯೇನು. ಅತ್ತೆ ಕೇಳಿದರೆ ಏನೆಂದು ಹೇಳಬೇಕು. ಅಂತೆಯೇ ಹೆಣ್ಣು ಪರಿ ಪರಿಯಿಂದ ಗಂಡಿಗೆ ಬೇಡಿಕೊಳ್ಳುತ್ತದೆ. ಆಗ ಗಂಡು ಕೈಬಿಡುತ್ತಾನೆ. ಹೀಗೆ ಗೌಪ್ಯವಾಗಿ ನಡೆದ ಗೆಣೆಯ ಗೆಣತಿಯರ ಪ್ರಣಯ ಚೇಷ್ಟೆಗಳು ಬಹಳ. ಯಾಕೆಂದರೆ ಅವರಿಗೆ ಹೇಳುವವರು ಕೇಳುವವರು ಯಾರೂ ಇರುವದಿಲ್ಲ. ಬರೀ ಚೇಷ್ಟೆ–ಹುಡುಗಾಟಗಳಲ್ಲೇ ಕಾಲ ಕಳೆಯುತ್ತಾರೆ.

ಹಚ್ಚೆನ ಹಣಿಬಟ್ಟು ಉದ್ದನ ಮಲಿಕಟ್ಟು
ಸಿಗದಂತ ಸಣ್ಣ ನಡುವಿನ । ಎಲೆ ಬಾಲಿ
ಮುರಕ ಮಾಡಬ್ಯಾಡ ಮುರದೀತು

ಎನ್ನುವ ಗಂಡಿನ ಈ ನುಡಿಯಲ್ಲಿ ಅದೆಂತಹ ಚೇಷ್ಟೆಯಡಗಿದೆ. ಬಿಂಕ – ಬೆಡಗು – ಬಿನ್ನಾಣಗಳು ಈ ವಯಸ್ಸಿನಲ್ಲಿ ಬಹಳ ಮುರುಕ ಮಾಡುವಾಕೆಯನ್ನು ಕಂಡಾಗ ಹುಡುಗ ಸಹಿಸುವದಿಲ್ಲ. 'ಮುರದಗಿರದೀತು ಹಿಂಗ್ಯಾಕಮಾಡ್ತಿ' ಎಂದು ನಗೆಯಲ್ಲಿಯೇ ತೇಲಿಸಿ ಬಿಡುತ್ತಾನೆ. ಇಂತಹ ಹಲವಾರು ಚೇಷ್ಟೆಯ ನುಡಿಗಳನ್ನು ಜನಪದರಲ್ಲಿ ಕಾಣಬಹುದು. ಗಂಡು ಹುಡುಗರ ಬಾಯಲ್ಲಂತೂ ಇವು ಮುತ್ತಿನ ಹಾಗೆ ಸುರಿಯುತ್ತವೆ.

ಕೆಂಪನ ಮೈಯುವಳ ಕ್ಯಾದಿಗಿ ಜಡಿಯುವಳ . . . .
ಹಾರುತಿ ಸಿನ ಬಣ್ಣ ಹಾಲಕಾಸಿದ ಗಿಣ್ಣ . . . .
ಒಡ್ಡೂತಿ ನಿನಗ್ಯಾಕ ಕಡ್ಡಿನೀಲದ ಬಳಿಯು . . . .
ತಾಟಗಿತ್ತೀಯು ಹೆಣ್ಣ ತೋಟಕ್ಕ ಬರಬ್ಯಾಡ . . . .
ಚಂದಾನ ಚಲುವೆವ್ವ ತಿಂದಾಳ ಪಡಿಕೂಳ . . . .
ಬೆಳ್ಳಿಯ ಬಳಿಯಾಕಿ ನೀಯೇನ ಒಳ್ಯಾಕಿ . . . . .
ಹೊರಕಡಿಗೆ ಹೋಗುವವಳ ಮುರಕೇನ ಹೇಳಲಿ . . . .
ಎರಕೊಂಡ ಕೆರಕೊಂಡ ಕುಲಾಯಿ ಮರತಾಳ . . . .
ಚಿತ್ತ ಚಿಕ್ಕೋಡಿಮ್ಯಾಲ ಗ್ಯಾನ ಗೆಣೆಯನಮ್ಯಾಲ . . . .
ತಾಂಬರ ಕೊಡದವಳ ತಾರಿಪ್ಯ ನೋಡ . . . .
ಕರ್‍ರನ್ನ ಕರಿಹೆಣ್ಣ ಕಾಲಾಗ ಸರಪಳಿಬಣ್ಣ . . . .

ಹೀಗೆ ಗಂಡು ಹೆಣ್ಣಗೆ ಚೇಷ್ಟೆ ಮಾಡಿದರೆ ಹೆಣ್ಣು ಇಷ್ಟೆಲ್ಲಾ ಅನ್ನಿಸಿಕೊಂಡು ಸುಮ್ಮನೇ ಕೂಡುವದಿಲ್ಲ. ಆತ ಹತ್ತು ಸಲ ಚೇಷ್ಟೆ ಮಾಡಿದರೆ ಆಕೆ ಒಂದು ಸಲವಾದರೂ ಅದು ತೋರಿಸುತ್ತಾಳೆ.

ತ್ವಾಟದ ಹುಡುಗನ ನೀಟೇನ ಹೇಳಲಿ . . . .
ತುರುಕರ ಹುಡುಗರ ತುದಿಗಾಲ ಪಾಪಸ . . . .
ಕೈಯs ಬಿಡು ನನ ಗೆಣೆಯ ಮೀಸಿ ಹಿಡಿದೇನ . . . .
ತಿಂದೋಡಿ ನನಗಂಡ ತಿಂದೇನ ಮಾಡುವಿ . . . .

ಇತ್ಯಾದಿ. ಹೀಗೆ ಅವರ ಚೇಷ್ಟೆಗಳಿಗೂ ಕಡಿಮೆಯಿಲ್ಲ.

ಗೆಣೆಯಾ – ಗೆಣತಿಯರ ಪ್ರಣಯ ಚೇಷ್ಟೆಗಳು ಒಂದು ತೆರನಾದರೆ ಗಂಡ – ಹೆಂಡತಿಯರ ಚೇಷ್ಟೆಗಳು ಮತ್ತೊಂದು ತೆರ

ಹಲ್ಲಿಗಿ ಹಲ್ಲೊತ್ತಿ, ಗಲ್ಲಕ ಗಲ್ಲೊತ್ತಿ
ನಲ್ಲಿಕಾಯಂಗ ಮಲಿ ಒತ್ತಿ । ಸತಿಯುಳ
ಗುಳದಾಳಿ ಒತ್ತಿ ಗುಳ್ಳೆದ್ದು

ಹೀಗೆ ಹೆಂಡತಿಯು ಗುಳದಾಳಿ ಒತ್ತಿಸಿಕೊಂಡು ಗುಳ್ಳೆ ಎಬ್ಬಿಸಿಕೊಂಡ ರಾಯ ಮರುದಿನ ತನ್ನ ಮಡದಿಯನ್ನು ಹಿಡಿದು ಕೇಳಿ ಚೇಷ್ಟೆ ಮಾಡುತ್ತಾನೆ. ಗಂಡ-ಹೆಂಡತಿಯರ ಚೇಷ್ಟೆಗಳು ನೋಡುಗರ ಕಣ್ಣಿಗೆ ಹಬ್ಬವಿದ್ದ ಹಾಗೆ. ಅತ್ತೆಯು ಕಣ್ಣು ತಪ್ಪಿಸಿ ಗಂಡನ ಕಿವಿ ಹಿಡಿಯುವ ಹೆಂಡತಿ; ತಂಗಿ-ತಾಯಂದಿರರು ಇರದ ಹೊತ್ತು ನೋಡಿ ಜಡಿ ಹಿಡಿದೆಳೆಯುವ ಗಂಡ ಹೀಗೆ ಒಬ್ಬರಿಗೊಬ್ಬರು ಚೇಷ್ಟೆಮಾಡುತ್ತ ಸಾಗಿಸುವ ಬದುಕಿನಲ್ಲಿ ನೋವು ಬಂದರೂ ಅಷ್ಟೆ ನಲಿವಿದ್ದರೂ ಅಷ್ಟೆ. ಅಂತೆಯೇ ನಮ್ಮ ಹಳ್ಳಿಗರ ಜೀವನ ಸಮರಸವಾದುದು ಸಮೃದ್ಧವಾದುದು.

"ಕಾಕಿ ಹಣ್ಣಿಲಿ ಹೊಡೆದ, ಕಮಳದ್ಹೂವಿಲಿ ಹೊಡೆದ
ತ್ವಾಟವಾಗಿರುವ ಗಜಲಿಂಬಿಲ್ಹೊಡೆದ..............."

ಎಂದು ಗಂಡಮಾಡಿದ ಚೇಷ್ಟೆಗಳನ್ನು ಅತ್ತೆಯ ಮುಂದೆ ಹೇಳುತ್ತಾಳೆ ಗರತಿ. ಇಲ್ಲಿಯ ರಸವತ್ತಾದ ರತಿವಿಲಾಸದ ಕಲ್ಪನೆಯನ್ನು ಯಾರಾದರೂ ಕಾಣಬಹುದು. ಅತ್ತೆಗೂ ಇವರ ಚೇಷ್ಟೆಗಳನ್ನು ಕಂಡು-ಕೇಳುವದೆಂದರೆ ಬಲು ಹಿಗ್ಗು.

ಹೀಗೆ ಹಲ್ಲಿಗೆ ಹಲ್ಲೊತ್ತುವದು, ಗಲ್ಲಕ್ಕೆ ಗಲ್ಲ ತಿಕ್ಕುವದು, ಬಾಯಲ್ಲಿ ಬಾಯಿಟ್ಟು ಚೀಪುವದು, ನೀಳವಾದ ಮೂಗಿನ ತುದಿ

ಯನ್ನು ನೆಕ್ಕಿ ಕಡಿಯುವದು, ಮುಂಗುರುಳು ಹಿಡಿದು ಜಗ್ಗಿ ಮೆಲ್ಲನೆ ಒತ್ತುವದು, ಕಿವಿಯಲ್ಲಿ ಗುಟುಕರಿಸುವದು, ಕಣ್ಣಲ್ಲಿ ಕಣ್ಣಿಟ್ಟು ನೋಡುವದು, ಮೈಯಿಗೆ ಮೈ ಅಂಟಿಸಿ ಬೆಸೆಯುವದು ಒಂದೇ-ಎರಡೇ ಹಲವಾರು ಚೇಷ್ಟೆಗಳನ್ನು ಮಾಡುತ್ತ ಸ್ವರ್ಗ ಸುಖದಲ್ಲಿ ಬಿದ್ದಿರುತ್ತಾರೆ ಪ್ರಣಯಿಗಳು.

ಮುದುಕ-ಮುದುಕಿಯರೂ ಚೇಷ್ಟೆಗಳನ್ನು ಮಾಡುತ್ತಾರೆ. ಅವರ ಚೇಷ್ಟೆಗಳಲ್ಲಿ ಹಾಸ್ಯ ಹೊನಲಾಗಿ ಹರಿಯುತ್ತದೆ. ಹೀಗೆ ಜನಪದದ ದಿನ ನಿತ್ಯದ ಬದುಕು ಚೇಷ್ಟೆಗಳಿಂದ ತುಂಬಿ ಉಲ್ಲಾಸ ಕರವಾಗಿರುತ್ತದೆ.

೫. ಗೆಣೆಯಾ - ಗೆಣತಿಯರ ಪ್ರಣಯ

ಗೆಣೆಯಾ - ಗೆಣತಿಯರಲ್ಲಿಯ ಪ್ರಣಯ, ಗಂಡ - ಹೆಂಡತಿ ಯರ ಪ್ರಣಯಕ್ಕಿಂತ ತೀರ ಭಿನ್ನವಾದುದು. ಇಲ್ಲಿ ನಾಚಿಕೆಯ ಸೋಂಕಿಲ್ಲ, ಮುಚ್ಚಿಡುವ ಮರೆಯಿಡುವ ವ್ಯವಹಾರವಿಲ್ಲ. ಅತ್ತೆ. ಮಾವಂದಿರರ ಕಾಟವಿಲ್ಲ; ತಂದೆ ತಾಯಿಗಳ ಹೆದರಿಕೆಯಿಲ್ಲ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳಂತೆ ಅವರ ಪ್ರಣಯ ಸುಖ ಕೊಡುವ ಸಮರಸದ ಕೂಟ. ಗಂಡ ಹೆಂಡತಿಯರಲ್ಲಿ ಇಂತಹ ಸ್ವಚ್ಛಂದ ಪ್ರವೃತ್ತಿ ಕಡಿಮೆ. ಎಷ್ಟೇ ಆದರೂ ಹೆಂಡತಿಯಾದವಳು ಹೆದರಿ ನಾಚಿನಡೆಯುವ ಸ್ವಭಾವ ಸಾಮಾನ್ಯ. ಆದರೆ ಇಲ್ಲಿ ಹಾಗಲ್ಲ. ಅಲ್ಲಿ ಗಂಡನಿಗೆ ಸುಖ, ತೃಪ್ತಿ ಸಿಕ್ಕರೆಸಾಕು ಹೆಂಡತಿಗೆ ತೃಪ್ತಿಸಿಕ್ಕಿತೆ? ಎಂದು ಕೇಳುವವರಿಲ್ಲ. ಗಂಡನ ತೃಪ್ತಿಯೇ ತನ್ನ ತೃಪ್ತಿಯೆಂದು ತಿಳಿದು ಆತನ ಸುಖ – ದುಃಖದಲ್ಲಿ ಸಮಭಾಗಿ

ಯಾಗಿ ಬೆಳಕು ತಂದು ಬಾಳಸಂಗಾತಿಯಾಗಿ ಜೀವನದುದ್ದಕ್ಕೂ ಜ್ಯೋತಿಹಚ್ಚಿ ಕಂಗೊಳಿಸುವ ಮಹಾಸುಮಂಗಲೆ ಹೆಂಡತಿ. ಆಕೆಯು ಪವಿತ್ರಸ್ನಾನ ಗೆಳೆಯನೊಡನೆ ಸರಸವಾಡುವ ಗೆಳತಿಗೆ ಸಿಗದು. ಸೂಳೆ ಉಂಡನಂತರ ಬೀಸಿ ಒಗೆಯುವ ಪತ್ರುಳಿ ಎಲೆಯಂತಾದರೆ; ಹೆಂಡತಿ ನಿರಂತರವಾಗಿ ಬೆಳಗಲ್ಪಡುವ ಬಂಗಾರದ ತಟ್ಟೆ.

ಗೆಳೆಯಾ - ಗೆಳತಿಯರಲ್ಲಿ ಸರಿಸಮಾನವಾದ ಮನೋಭಾವ ಬೆಳೆದಿರುವದರಿಂದ. ಸಮಯಸಿಕ್ಕಾಗ ಗೆಳೆಯನನ್ನು ಮುಳ್ಳಿಗೆ ದಬ್ಬುವಲ್ಲಿ ಆಕೆ ಹಿಂಜರಿಯುವದಿಲ್ಲ. ಆದರೆ ಅವರ ಸ್ವೇಚ್ಛಾಟ ಒಬ್ಬರಿಗೊಬ್ಬರು ಬೆಸೆದುಕೊಂಡು ತೃಪ್ತಿಯಾಗುವ ವರೆಗೂ ಹೊಂದುವ ಸುಖ ದಂಪತಿಗಳಲ್ಲಿ ಭಿನ್ನತೆ ತಾಳುತ್ತದೆ.

ಹಾಡು ಹಾಡೆಂದರೆ ನಾನೇನು ಹಾಡಾಲಿ
ಹಾಡೊ ನನಗೆಳೆಯ ನನಮ್ಯಾಲೆ । ಮೂಡಣ
ಜಾಣ ಕೋರೀಗಿ ಹೊಡದ್ಹಾಂಗ

ಎಂದು ಎದೆಯುಬ್ಬಿಸಿ ಕೇಳುತ್ತಾಳೆ ಗೆಳತಿ. ಹಾಡದಿದ್ದರೆ ಕಿವಿ ಹಿಂಡಿ ಹಾಡಿಸುತ್ತಾಳೆ. ಆಗ ಗೆಳೆಯಾ ಹಾಡಲೇ ಬೇಕಾಗುತ್ತದೆ. ಆದರೆ ಈ ಒತ್ತಾಯ, ಧೈರ್ಯ, ಖಡಾಖಂಡತೆ ಹೆಂಡತಿಯಾದವಳಿಗೆ ಬರುವದಿಲ್ಲ.

ಕಬ್ಬು ಕಾರುಳ್ಳವನ, ಹುಬ್ಬುನೇರುಳ್ಳವನ
ಗೊಬ್ಬರದ ಗಾಡಿ ಹೊಡೆಯಾವ । ಗೆಳೆಯಾನ
ಹುಬ್ಬಿಗಿನ್ನೊಂದು ಸರಿಪುಟ.

ಎಂದು ಗೊಬ್ಬರದ ಗಾಡಿಹೊಡೆಯುವ ಗೆಳೆಯನ ಗುಣಗಾನ ಮಾಡುತ್ತಾಳೆ. ಹಳ್ಳಿಯ ಹೆಂಗಸರಿಗೆ ಗಟ್ಟಿಮುಟ್ಟಾದ ಶಕ್ತಿಯುತವಾದ ಕ್ಯಾರೀಮೀಸೆ ಬಿಟ್ಟ ಗಂಡುಗಳನ್ನು ಕಂಡರೆ ತೊಡೆ

ಯುರಳುತ್ತವೆ ಮೈ ಬಿಚ್ಚುತ್ತದೆ. ಆಗ ಮನೆಯಲ್ಲಿಯ ಗಂಡನಿಗೆ ಮಳ್ಳುಮಾಡಿ ಮಿಂಡನನ್ನು ಕೂಡುತ್ತಾರೆ.

ನಯ -ನಾಜೂಕು ಸೂಕ್ಷ್ಮತೆ ಅವರಿಗೆ ಹಿಡಿಸುವದಿಲ್ಲ.

ಕ್ವಾರಿ ಮಿಸೇಯ ತಿದ್ದಿ ನೀರಿಗಿ ಹೋಗುವಾಗ
ದಾರ್‍ಯಾಗ ಕಂಡೆ ಚೆಲುವನ್ನ। ಮನಸಾಗಿ
ವಾರ್‍ಯಾಗ ತರುಬಿ ಕೇಳೀನ.

ಹೀಗೆ ಕ್ವಾರಿಮೀಸೆಯ ಚೆಲುವನನ್ನು ತರುಬಿ ಕೇಳುವ ಧೈರ್ಯವೂ ಅವಳಿಗೆ ತನ್ನಿಂದ ತಾನೇ ಬರುತ್ತದೆ. ಅಂತಹ ಹರೆಯದ ಯುವಕರನ್ನು ಕಂಡಾಗ ಆಕೆಗೆ ಸ್ಫೂರ್ತಿ ಉಕ್ಕುತ್ತದೆ.

ಚಿತ್ತ ಚಿಕ್ಕೋಡಿ ಮ್ಯಾಲ ಗ್ಯಾನ ಗೆಣೆಯನ ಮ್ಯಾಲ
ನೂಲುವ ಕದರ ತೊಡಿಮ್ಯಾಲ| ಇಟಗೊಂಡ
ಗ್ಯಾನ ಮಾಡುವಳೊ ಗೆಣೆಯಾನ

ಒಮ್ಮೆ ಹೆಣ್ಣಿಗೆ ಗಂಡಿನ ರುಚಿ ಹತ್ತಿತೆಂದರೆ ಬಿಡುವದೇಯಿಲ್ಲ. ಯಾವ ಕೆಲಸ ಮಾಡುತ್ತಿದ್ದರೂ ಗೆಣೆಯನ ಗ್ಯಾನ ಮಾತ್ರ ಮನದಲ್ಲಿ ತಳವೂರಿರುತ್ತದೆ.

ನಡುಕಟ್ಟಿ ಪಡಕಟ್ಟಿ ನಡುವ ಗಂಧದ ಬಟ್ಟಿ
ನಡು ಓಣ್ಯಾಗವನ ಹುಡದೀಯೋ। ಆಡದುಕಂಡು
ಹೂರಣಕ ಬೆಲ್ಲ ಮರತಾಳೊ

ಪ್ರಣಯದ ಹುಚ್ಚೇ ಅಂತಹದು. ಒಮ್ಮೆ ಪ್ರಾರಂಭವಾಯಿತೆಂದರೆ ನಿಲ್ಲುವದೇ ಬಲುಕಷ್ಟ. ಅದರಲ್ಲೂ ಹುಡದಿಯಾಡುವ ಹುಡುಗನನ್ನು ಕಂಡ ಆಕೆ ಅವನ ಗಟ್ಟಿಮುಟ್ಟಾದ ತೊಡೆ, ವಿಶಾಲವಾದ ಎದೆ, ಆಡುವಾಗ ಪುಟಿ-ಪುಟಿದು ಬರುವ ಯೌವನದ

ಮಿಂಚು, ಹರೆಯದ ಆರ್ಭಟ ಇವುಗಳನ್ನು ಕಂಡು ಹೊರಗಿಕ್ಕೆ ಅದ್ದೇಗೆ ಬೆಲ್ಲ ಹಾಕುತ್ತಾಳೆ!

ಹೀಗೆ ಮೆಚ್ಚಿದ ಹುಡುಗನನ್ನು ತನ್ನ ಬಲೆಯಲ್ಲಿ ಹಾಕಿಕೊಳ್ಳಲು ಯತ್ನಿಸಿದಾಗ:

ಕರದ ಕರಚಿಯ ಕಾಯಿ ಮಿರದ ಗಂಗಳಕ್ಹಾಕಿ
ತುದಿಗಟ್ಟೀಗಿ ನಿಂತು ಕೈಸನ್ನಿ। ಮಾಡಿದರ
ಉಂಡೀನಿ ನನಗ ಹಸಿವಿಲ್ಲ

ಎನ್ನುತ್ತಾನೆ ಈ ಬಹಾದ್ದೂರಗಂಡು. ಆದರೂ ಆಕೆ ಪ್ರಯತ್ನ ಬಿಡದೇ ಮುಂದುವರೆಸುತ್ತಾಳೆ.

ಅತ್ತತ್ತ ಹೋಗವನ ಇತ್ತತ್ತ ಕರದಾಳ
ಉತ್ತತ್ತಿ ಊಟ ಉಣಸ್ಯಾಳ। ಆ ಬಾಲಿ
ತುಪ್ಪದಲಿ ಕೈಯ ತೊಳಿಸ್ಯಾಳ

ಒಲ್ಲೆನೆಂದ ಹುಡುಗ, ಹುಡುಗಿಯ ಒತ್ತಾಯಕ್ಕೆ ಬಿದ್ದು ತುಪ್ಪದಲ್ಲಿ ಕೈ ತೊಳೆಯುತ್ತಾನೆ. ಅಲ್ಲಿಗೆ ಅವರ ಮಿಲನ ಸಾಧ್ಯವಾಗುತ್ತದೆ.

ಎಳ್ಳು ಹಚ್ಚಿದ ರೊಟ್ಟಿ ಎಣ್ಣಿ ಬದನಿಕಾಯಿ
ಗುಂಡದ ಬಲ್ಲಿ ಉಣಸ್ಯಾಳ। ಆ ಬಾಲಿ
ಮರಿ ಅಂದರ ಹ್ಯಾಂಗಮರಿಯಲಿ

ಎಂದು ಅವನೂ ಈಗ ಆಕೆಯನ್ನು ಮರೆಯದೆ ಒಡಗೂಡಿ ಒಂದಾಗುತ್ತಾನೆ. ಆಕೆಯ ರೂಪ, ಸೌಂದರ್ಯ, ದೇಹಸುಖ ಇವುಗಳನ್ನು ನೆನಸಿದಂತೆಲ್ಲಾ ಆಕೆಯ ಮೇಲಿನ ಆತನ ಪ್ರೇಮ ಉಕ್ಕೇರುತ್ತದೆ. ಆಗ ಅತನೂ ಆಕೆಯನ್ನು ಬಿಟ್ಟಿರಲಾರ.

ಸಾವುಕಾರ ಮನಿಮುಂದ ಸಾಸಿವಿಗಿಡ ಹುಟ್ಟಿ
ಸಾವುಕಾರ ಹುಡುಗಿ ಗೆಳೆತನ। ಮಾಡಿದರ
ಸ್ಯಾವಿಗಿ ಮಾಡಿ ಉಣಿಸ್ಯಾಳ

ಕಳ್ಳೀಯ ಕಡಕಡದು ಕೈಯುಲ್ಲಾ ಗುಳ್ಳೆದ್ದು
ತೆಳ್ಳನ್ನ ಪೋರಿ ಗೆಳೆತನ। ಮಾಡಿದರ
ಎಳ್ಹೋಳಿಗಿ ಮಾಡಿ ಉಣಸ್ಯಾಳ

ಸ್ಯಾವಿಗಿಯು ಸವಿ, ಎಳ್ಹೋಳಗಿಯು ರುಚಿ ಹತ್ತಿದ ಗೆಣೆಯಾ ತನ್ನ ಗೆಣತಿಯನ್ನು ನೆಳ್ಳಿನಂತೆ ಹಿಂಬಾಲಿಸುತ್ತಾನೆ. ಗಾಢವಾಗಿ ಬೆಳೆದ ಅವರ ಪ್ರೇಮವೃಕ್ಷ ಈಗ ದೊಡ್ಡದಾಗುತ್ತದೆ. ಇಂತಹ ಸಮಯ ದಲ್ಲಿ ಎಂತವರಿಗೂ ಅದನ್ನು ಕಡೆಯುಲಿಕಾಗುವದಿಲ್ಲ.

ಗೋಕಾವಿ ಕುಪ್ಪಸ ಬೇಕಾಗಿ ತರಸ್ಯಾಳ
ಮುಂಗ್ಯಾನ ತಗಸ್ಯಾಳ ಮಲಿಮ್ಯಾಲ। ಆ ಹುಡುಗಿ
ನನ್ನ ತಗಿಸ್ಯಾಳ ಎದಿಮ್ಯಾಗ

ಎಂದು ತನ್ನ-ಅವಳ ಪ್ರೀತಿ ಬೇರು ಬಿಟ್ಟಿರುವ ವಿಚಾರವನ್ನು ಆತ ವ್ಯಕ್ತ ಪಡಿಸುತ್ತಾನೆ. ಅಂತೆಯೇ ಆ ತೆಳ್ಳನ ಹುಡುಗಿಯು ಗೆಳೆತನ ಆತನಿಗೆ ಬಹಳ ಹಿತಕರ.

ಬೆಳ್ಳಾನ ಬೆಳದಿಂಗಳ. ಬೆಳ್ಳೀಯ ಕಾಲುಂಗರ
ತೆಳ್ಳಾನ ಹುಡುಗೀಯು ಗೆಣೆತಾನ। ಮಾಡಿದರ
ಬಿಸಿಲಾಗ ಕುಸುಬಿ ಕೋದಾಂಗ

ಎಂದು ಮತ್ತೆ ಆ ಗೆಳೆತನದ ಪ್ರಾಮುಖ್ಯತೆಯನ್ನು ಒತ್ತಿ ಹೇಳು ತ್ತಾನೆ. ಇಲ್ಲಿ ಬರುವ 'ಬಿಸಲಾಗ ಕಸುಬಿ ಕೋದಾಂಗ' ಎಷ್ಟು ಅರ್ಥ ಪೂರ್ಣವೋ– ಅಷ್ಟೇ ಸತ್ವಪೂರ್ಣವೂ ಕೂಡ, ಎಂತಹ ಪಂಡಿತನ ಕೃತಿಯೂ ಈ ಜನಪದ ಕವಿಯ ಹೋಲಿಕೆಗೆ ಸಾಟಿಯಾಗದು. ಹಸಿಗೋಡೆಗೆ ಹಳ್ಳು ಒಗೆದಂತೆ ತಟ್ಟನೆ ಮನಕ್ಕೆ ಮುಟ್ಟುವ

ಹೃದಯಕ್ಕೆ ತಟ್ಟುವ ಈ ವಿಚಾರಗಳು ಕನ್ನಡ ಸಾಹಿತ್ಯದ ಗಟ್ಟಿಗಾಳುಗಳು.

ಎಗಸೀದ ರುಮ್ಮಾಲು ಸಿಗಸೀದ ತುರಾಯಿ
ಅಗಸ್ಯಾಗ ಗೆಣೆಯಾ ಇದರೀಗೆ । ಬಂದರ
ಸಿಗಸೀದ ನಿರಿಗಿ ಕಳಚ್ಯಾವ
ಬಂಗಾರಕಡ್ಡಿ ಧೋತರ ಜರಜರದ ರುಂಬಾಲ
ಸೊಗಸೀನ ಗೆಣೆಯಾ ಇದರೀಗೆ । ಬಂದರ
ಸೊಗಸೀನ ತವರ ಮರತೇನ

ಅಗಸಿಯಲ್ಲಿ ಬರುವ ಗೆಣೆಯನನ್ನು ಕಂಡಕೂಡಲೇ ಸಿಗಸಿದ ನಿರಿಗಿ ಕಳಚಿ ಬೀಳಬೇಕಾದರೆ ಹೆತ್ತ ತವರನ್ನೇ ಮರೆತು ಹಿಂದೆ ಬರಬೇಕಾದರೆ; ಗೆಣೆಯನ ಮೇಲಿಟ್ಟಿರುವ ಪ್ರೀತಿ-ವಿಶ್ವಾಸಗಳು ಅಷ್ಟಿಷ್ಟಲ್ಲ. ಅದಕ್ಕೆ ಅತನಾದರೂ ಹೊರತಿಲ್ಲ:

ಗುತ್ತೀಗೆ ಮಲೆನಾಡ, ಎತ್ತು ಮಾರಲು ಹೋದೆ
ಒತ್ತಿಯಬಿದ್ದ ತಡವಾತ । ನನ ಗೆಣತಿ
ಚಿತ್ತ ನಿನಮ್ಯಾಲೆ ಸೆಡುಬ್ಯಾಡ
ಈ ವರುಷ ಬಂದೀನೆ ಮೀಸೆಯ ತಿದ್ದೀನೆ
ವಾಸ್ಯಾಡ ಬ್ಯಾಡ ನನಗೂಡ । ಎಲೆ ಹುಡುಗಿ
ಬೇಸ್ಯಾಂಗ ಬೆಳಕು ಕಳಿಯೋಣ

'ನಾನು ಎಲ್ಲಿ ಹೋದರೂ ನನ್ನ ಚಿತ್ತವೆಲ್ಲಾ ನಿನ್ನ ಮೇಲೆಯೆ, ಇನ್ನು ಮುಂದೆ ಅಗಲುವದೇ ಬೇಡ' ಎಂದು ಗೆಣೆಯಾ ಹೇಳಿದಾಗ ಆಕೆಗೆ ಸ್ವರ್ಗ ಮೂರೇ ಗೇಣು. ಆಗ ಎಲ್ಲರನ್ನು ತೊರೆಯಲು ಸಿದ್ಧಳಾಗುತ್ತಾಳೆ.

ಅತ್ತಿ ಸಾಯಲಿಬೇಕ ಹತ್ತೆಮ್ಮಿ ಕಟ್ಟುವೆ
ಮೈದುನಗ ಹಾವ ಕಡಿಯಲಿ | ನನ ಗೆಣೆಯಾ
ಗಂಡಗ ಸಿಡಿಲ ಬಡಿಯಲಿ

ಎನ್ನುವಷ್ಟರ ಮಟ್ಟಿಗೆ ಅವಳ ನಿರ್ಧಾರ ಅಚಲವಾಗುತ್ತದೆ. ಈಗ ಎಲ್ಲರೂ ಸತ್ತರೂ ಪರವಾಯಿಲ್ಲ ಆದರೆ ಗೆಣೆಯ ಮಾತ್ರ ಮುಂದಿರಬೇಕು. ಈ ರೀತಿ ಗಟ್ಟಿಗೊಳ್ಳುವ ಅವಳ ಅಂತರ್ಯದ ಧ್ವನಿ; ಗೆಣೆಯನ ಮೇಲಿಟ್ಟಿರುವ ಆಕೆಯ ವಿಶ್ವಾಸ ಪ್ರಣಯದ ಆಳವನ್ನು ಪದರು-ಪದರಾಗಿ ಬಿಚ್ಚಿ ತೋರಿಸುತ್ತವೆ. ಒಮ್ಮೊಮ್ಮೆ ಜೀವನವೇ ದುರಂತಮಯವಾಗುವದು, ರೌದ್ರಾಕಾರವನ್ನು ತಾಳುವದು, ಹಂಗು ದೊರೆದು ಹೋರಾಡುವದು ಇದೇ ಪ್ರಣಯದ ಸಲುವಾಗಿ.

ಎರಿಹೆಂಟಿ ಬರಿಗಾಲ, ನಡುವೆ ನೆಗ್ಗಿನ ಮುಳ್ಳ
ಹುಡುಗಿ ನಿನ್ನ ಕಳುವಿ ಬರುವಾಗ । ಕಣ್ಣೀರು
ಸಣ್ಣ ಮುತ್ತಾಗಿ ಉದರ್ಯಾವ

ಎನ್ನುವ ಕಣ್ಣೀರು ಸಣ್ಣ ಮುತ್ತಾಗುವ ಈ ಹೋಲಿಕೆ ಸುಂದರವಾದುದು. ಇದಕ್ಕೆ ಪ್ರತಿಯಾಗಿ ಆಕೆ ಹೇಳುವ ಮಾತು ಕೂಡ ಅಷ್ಟೇ ಗಮನಾರ್ಹವಾದುದು.

ಕೊರಿ ಹೆಂಟಿ ಬರಿಗಾಲ ನಡುವೆ ನೆಗ್ಗಿಲ ಮುಳ್ಳ
ಗೆಣೆಯಾ ನಿನ್ನ ಕಳುಹಿ ಬರುವಾಗ| ಕಣ್ಣೀರ
ಸ್ವಾತಿ ಮಳಿಹಂಗ ಸುರದಾವ

ಕಣ್ಣೀರನ್ನ ಸ್ವಾತಿಮಳಿಗೆ ಹೋಲಿಸುವ ಈ ಗರತಿಯಲ್ಲಿರುವ ಜೀವನದ ದಟ್ಟವಾದ ಅನುಭವ, ಔಚಿತ್ಯಪೂರ್ಣ ಹೇಳಿಕೆ ಎಂತವರನ್ನಾದರೂ ತಲೆದೂಗಿಸುವಂತತವು.

ಹೀಗೆ ಪ್ರೀತಿಸಿದ ಗೆಣೆಯನನ್ನು ಸಮಯಸಾಧಿಸಿ ತನ್ನ ಮನೆಗೆ ಆಹ್ವಾನಿಸುವ ಆಕೆಯ ಜಾಣ್ಮೆ ಬಹಳ ಸೂಕ್ಷ್ಮವಾದುದು.

ಸರಗಿ ಕೊಂಡಿಹಾಂಗ, ತಿರುಗ್ಯಾವ ನಿನಮೀಸಿ
ತಿರುಗ್ಯಾಡುತಬಾರೊ ಮನಿಕಡಿಗಿ| ನನಗಂಡ
ಹೋಗ್ಯಾನ ಪಡಿಯ ಹೊಡಿಲಾಕ

ಎಂದು ಉಪಾಯ ಹುಡುಕಿ ಹೇಳಿದ ಆಕೆ ಎಂತಹ ಸಮಯದಲ್ಲಿ ಬಂದರೆ ಏನಾಗುತ್ತದೆ ಎಂಬುದನ್ನು ಬಲ್ಲಳು. ಅಂತೆಯೇ ಎಚ್ಚರಿಕೆ ಕೊಡುವದನ್ನೂ ಮರೆಯುವದಿಲ್ಲ.

ಕರಿಯ ಕಂಬಳಿಯವನ, ಬಿಳಿಯ ಧೋತರದವನ
ಬೆಳದಿಂಗಳದಾಗ ಬರಬ್ಯಾಡ| ನನಗೆಣೆಯಾ
ನನ್ನಿಂದ ಹರಲಿ ಹೊರಬ್ಯಾಡ

ಎಂಬುದು ಮುನ್ನೆಚ್ಚರಿಕೆಯಲ್ಲದೆ ಮತ್ತೇನು. ಹೀಗೆ ರಸವತ್ತಾಗಿ ಆವರೀರ್ವರಲ್ಲಿ ಪ್ರೀತಿ ಬೆಳೆಯುತ್ತಿರುವಾಗ ಆಕೆ ತನ್ನ ಇಚ್ಛೆಯನ್ನು ಅತ್ಯಂತ ನಾಜೂಕಿನಿಂದಲೇ ವ್ಯಕ್ತಪಡಿಸುತ್ತಾಳೆ.

ಸರದಾರ ನನಗೆಣೆಯ ಸರಗಿ ಮಾಡಿಸಿಕೊಡ
ಸರಿಗೆಳತೇರ ಒಳಗ ಇರತೇನಿ| ನನಗೆಣೆಯ
ಕರದಾಗವೊಮ್ಮೆ ಬರತೇನಿ

ಎಂದು ಆತನ ಹೆಗಲಿಗೆ ತೆಕ್ಕಿಬೀಳುತ್ತಾಳೆ. ಯಾವಾಗ ಕರೆದರೂ ತಾನು ಸಿದ್ಧವೆಂದು ಚುಂಬಿಸುತ್ತಾಳೆ. ಆಗ ಆತ

ಈಟೀಟ ಮೊಲೆಯವಳ, ಚೀಟ ಕುಪ್ಪಸದವಳ
ಬ್ಯಾಟಿಹೊಗತೀನಿ ಕೈಬಿಡ| ಮಲ್ಲಾಡ
ಜೇನ ತರತೀನಿ ಸವಿನೋಡ

ಎಂದು ಜೇನಿನ ಸವಿತೋರಿಸಿ ಹೋಗುತ್ತಾನೆ. ಹೀಗೆ ಹೋದ ಗೆಣೆಯಾ ಬರದೇ ಬಹಳ ದಿನಗಳಾದಾಗ ಆಕೆಗೆ ತಡೆಯುವದಾಗುವದಿಲ್ಲ, ದುಃಖ ಒತ್ತರಿಸಿಬರುತ್ತದೆ.

ಗೆಣಸೀನ್ಹೋಳಿಗಿಮಾಡಿ, ಎಣಿಸಿ ಗಂಗಾಳಕ್ಹಾಕಿ
ನೆನಸೀದ ಗೆಣೆಯು ಬರಲಿಲ್ಲ। ಆ ಹುಡುಗಿ
ಮನಸಿನಾಗ ಮರಗಿ ಅಳತಾಳ

ಹೀಗೆ ಅಗಲುವಿಕೆ ಗೆಣೆಯಾ – ಗೆಣತಿಯರಿಗೆ ಸಹಿಸಲಿಕ್ಕಾಗುವದಿಲ್ಲ. ವಿರಹವೆಂಬುದು ಪ್ರಣಯಕ್ಕೆ ವೈರಿಯಿದ್ದ ಹಾಗೆ. ಬಹಳ ದಿನ ಅಗಲಿದರೆ ಏನನ್ನೋ ಕಳೆದುಕೊಂಡಂತೆ, ಎಂತಹದೋ ಕೈಜಾರಿದಂತೆ.

ಪ್ರಣಯಿಗಳ ವಯಸ್ಸು ಸ್ವಲ್ಪ ಹೆಚ್ಚು ಕಡಿಮೆ ಸಮವಾಗಿದ್ದರೇನೇ ಒಳ್ಳೆಯದು. ಒಂದುವೇಳೆ ಹುಡಗ ಬಹಳ ಎಳೆ ವಯಸ್ಸಿನವನಾದರೆ ಆಕೆಗೆ ದೈಹಿಕ ಸುಖ ದಕ್ಕುವದಿಲ್ಲ. ಅಂತಹ ಒಂದು ಉದಾಹರಣೆಯನ್ನು ಜನಪದ ಕವಿ ಕೊಡುವ ರೀತಿ ಗಮನಾರ್ಹ.

ಗುಡ್ಡದ ವಾರ್‍ಯಾಗ, ಕಡ್ಡಿ ಕೊಯ್ಯುವನಾರ
ಗಡ್ಡsನಿಲ್ಲದ ಎಳಿಹುಡಗs । ನ ಕೂಡ
ಗುದ್ದ್ಯಾಡಿ ಬಳಿಯ ಒಡಕೊಂಡ್ಲ

ಬರೀ ಗುದ್ದಾಡಿ ಬಳಿ ಒಡೆದುಕೊಳ್ಳುವದೇ ವಿನಃ ಮತ್ತಾವ ಹೆಚ್ಚಿನ ಸುಖವೂ ಆವನಿಂದ ಸಿಗದು ಎಂಬ ಮಾತನ್ನು ಸ್ಪಷ್ಟಪಡಿಸುತ್ತಾನೆ ಜನಪದ ಕವಿ. 'ಹುಲ್ಲು ಬೆಂಕಿ ಅಲ್ಲಂತ ಹುಡುಗ ನೆಂಟ ಅಲ್ಲಂತ' ಎನ್ನುವ ಗಾದೆಯೂ ಈ ಮಾತನ್ನೇ ಪ್ರತಿನಿಧಿ

ಸುತ್ತದೆ. ಆದ್ದರಿಂದ ಪ್ರಣಯಿಗಳಿಗೆ ಸರಿಸಮವಿರುವ ವಯಸ್ಸು ಕೂಡ ಬಹಳ ಮಹತ್ವದ್ದು.

ಇನ್ನು ವಿವಿಧ ರೀತಿಯ – ನಾನಾ ಜಾತಿಯ ಹುಡಗಿಯರ ಸುಖವನ್ನುಂಡ ಹುಡುಗರೂ ಉಂಟು. ಅವರ ಅನುಭವ ಬಹಳ ಕುತೂಹಲವಾದುದು.

ಗಾಣಿಗೇರ ಹುಡಗೀದು ಬಣ್ಣೇನು ಹೇಳಲಿ. . . . .
ಅಯ್ಯಗೋಳ ಪೋರಿದು ಬಣ್ಣೇನು ಹೇಳಲಿ. . . .
ಕಬ್ಬಲಿಗರ ಪೋರಿದು ಒಡ್ಡೇನು ಹೇಳಲಿ. . . . .
ಉಪ್ಪಾರ ಪೋರಿದು ಉಪ್ಪದ್ರ ಭಾಳಾಯ್ತು. . . .
ಅಟ್ಟ ಹಾರುವ್ರ ರ್‍ಪುಡಿಗಿ ಹಚ್ಯಾಳ ಪರಿನಾಮ. . . .
ಬಣಜಿಗರ ಹುಡಗಿಯ ಬಣ್ಣೇನ ಹೇಳಲಿ. . . . . .
ಮುಸಲರ ಹುಡಗೀಯ ಖುಷಿಯೇನ ಹೇಳಲಿ. . . .

ಈ ರೀತಿಯ ವಿಚಾರಗಳು ಹೆಣ್ಣಿನ ಬಗೆಗಾದರೆ; ವಿವಿಧ ರೀತಿಯ ಹುಡುಗರ ಸಹವಾಸ ಮಾಡಿದ ಹುಡುಗಿ ಹೇಳುವ ಮಾತುಗಳೂ ಕೂಡ ಅಷ್ಟೇ ಕೇಳುವಂತಹವುಗಳು:

ಜಂಗಮರ ಹುಡುಗನ ಹ್ಯಾಂಗ ಸಲುವಲಿ ಶಿವನೆ. . .
ತುರುಕರ ಹುಡುಗಗ ತುದಿಗಾಲ ಪಾಪಸ. . . . . .
ನಾಯಕರ ಹುಡುಗನ ಗೆಣೆತಾನ ಏನ್ಹೇಳ್ಲಿ. . . . .
ಆರ್‍ಯಾರ ಹುಡುಗನ ಹವಣೇನ ಹೇಳಲಿ. . . . . .
ಕೂಡಿದರ ಕೊಡಬೇಕ ಬೇಡರ ಹುಡುಗಾನ. . . . .

ಇತ್ಯಾದಿಗಳು.

ಈ ರೀತಿ ವಿವಿಧ ರೀತಿಯ ಹುಡುಗ–ಹುಡುಗಿಯರ ವಿಭಿನ್ನ ಗುಣಗಳನ್ನು ಕಾಣಬಹುದು.

ಇನ್ನು ಸಂಬಂಧಿಕರಲ್ಲಿ, ಬಳಗದವರಲ್ಲಿ ಪ್ರಣಯ ಹರಡಿರುವದನ್ನು ನೋಡಬಹುದು.

ಮಾವನ ಮಗಳೆ, ಕೋಗಿಲೆ ದನಿಯವಳೆ
ತಾವರೆ ಮೊಗ್ಗಿ ಮೊಲೆಯವಳೆ। ಅರಗಿಳಿಯೆ
ಬಾಯಾರಿ ಬಂದೆ ನೀರ್ಕೊಡ

ಎಂದು ನಿಬ್ಬಣಕ್ಕೆ ಹೋದ ಹಳ್ಳಿಯ ಹುಡುಗನು ತನ್ನ ಮಾವನ ಮಗಳ ರೂಪ-ಲಾವಣ್ಯಕ್ಕೆ ಮನಸೋತು ಮರುಳಾಗುತ್ತಾನೆ. ಅದೇ ಮುಂದೆ ಸ್ನೇಹವಾಗಿ, ಸ್ನೇಹ ಪ್ರಣಯಕ್ಕೆ ತಿರುಗಿ ಅದು ಮದುವೆಯಲ್ಲಿ ಮಂಗಲವಾಗಬಹುದು ಇಲ್ಲವೆ ಮಧ್ಯದಲ್ಲಿಯೇ ಮುರಿದು ಮನಸ್ತಾಪವಾಗಬಹುದು. ಪರಿಸರ-ಪರಿಸ್ಥಿತಿಗಳು ಹೇಗೆ ಬರುತ್ತಿವೆಯೆಂಬುದನ್ನು ಹೇಳಲಿಕ್ಕಾಗುವದಿಲ್ಲವೆಂಬುದನ್ನು ಮನಗಂಡ ತಾಯಿ ತನ್ನ ಮಗಳಿಗೆ ಕೊಡುವ ಎಚ್ಚರಿಕೆ ವೈಚಾರಿಕ ಪೂರ್ಣವಾದುದು.

ನಡದರs ನಡುಸಣ್ಣ ಪದುಮ ಜಾತಿಯ ಹೆಣ್ಣ
ಮಾವಿನ ಹೋಳ ನಿನ ಕಣ್ಣ। ನನ ಮಗಳ
ಮಾವ ಬಂದಾನ ಒಳಗ್ಹೋಗ

ಎಂದು ಸೂಕ್ಷ್ಮವಾಗಿ ಮಾವ ಬಂದುದ್ದನ್ನು ಸೂಚಿಸಿ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸುತ್ತಾಳೆ.

ಅತ್ತೆಯ ಮಗಳ ಸಲುಗೆ ಹೊಂದಿದ ಗಂಡು ಇನ್ನೂ ಸಮೀಪಕ್ಕೆ ಹೋಗಿ ಮುಂದುವರಿಯುವ ರೀತಿ ಬಹಳ ಮಜಾ ಇರುತ್ತದೆ.

ಅತ್ತೆಯ ಮಗಳೆಂದು ಹತ್ತಿರ ಕರೆದರೆ
ವತ್ತಿದರೇನಾಗೋದೆ ? ಬಲೆನಾರಿ
ಮುಟ್ಟಿದರೇನಾಗೋದೆ ?

ಎಂದು ಮುಟ್ಟಲು-ಒತ್ತಲು ಹಾತೊರೆಯುತ್ತಾನೆ.

ಹೀಗೆ ಗೆಳೆಯಾ-ಗೆಳತಿಯರಲ್ಲಿ ಬರುವ ಪ್ರಣಯ ವೈವಿಧ್ಯಮಯವಾದುದು.

೬. ಗಂಡಾ-ಹೆಂಡತಿಯರ ಪ್ರಣಯ

ಜೀವನದಲ್ಲಿಯ ಅತ್ಯಂತ ಮಹತ್ವದ ಘಟ್ಟವೆಂದರೆ ಮದುವೆ. ಮದುವೆಯಾದ ನಂತರ ಹುಡುಗ ಯಜಮಾನನಾಗುತ್ತಾನೆ. ಜವಾಬ್ದಾರಿ ಹೆಚ್ಚುತ್ತದೆ; ಹುಡುಗಿ ಸುಮಂಗಲೆಯಾಗುತ್ತಾಳೆ. ಬೆಳಕು ಹೆಚ್ಚುತ್ತದೆ. ಗಂಡನ ಮನೆಗೆ ಕಾಲಿಟ್ಟಾಗ ಹೆಣ್ಣಿನ ಜೀವನದ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ತವರು ಮನೆಯಲ್ಲಿ ತಾಯಿಯ ವಾತ್ಸಲ್ಯದಲ್ಲಿ ಬೆಳೆದ ಆ ಮಗಳು ಈಗ ಬೇರೆಯವರ ಮನೆಗೆ ಬಂದು, ತವರು ಮನೆಯವರೆಲ್ಲರನ್ನೂ ಅಗಲಿ ಗಂಡನೊಡನೆ ಬದುಕು ಸಾಗಿಸಬೇಕಾಗುತ್ತದೆ. ಆಕೆಗೆ ಆಗ ಎಲ್ಲದೂ ಹೊಸದು. ಆದರೂ ಪ್ರಯತ್ನಮಾಡಿ ಗಂಡನ ಮನೆಯ ಪರಿಸ್ಥಿತಿಗೆ ಹೊಂದಿಕೊಂಡು ಗಂಡನೇ ದೇವರೆಂದು ತಿಳಿದು ಪೂಜಿಸಿ ಗಂಡನನ್ನು ಒಲಿಸಿಕೊಳ್ಳುತ್ತಾಳೆ. ಆಕೆಯ ಪ್ರೇಮ ಪೂಜೆ ಆತನಿಗೂ ಹಿತಕಾರಿ. ದಿನದಿಂದ ದಿನಕ್ಕೆ ಗಂಡನ ಮೇಲಿನ ಪ್ರೀತಿ ಇಮ್ಮಡಿಸಿ ತವರನ್ನೇ ಮರೆಯುತ್ತಾಳೆ.

ಸರದಾರ ನಿಮ್ಮಿಂದ ಸರುವೆಲ್ಲ ಮರತೇನ
ಸರದಾಗ ಇರುವ ಗುಳದಾಳಿ | ನಿಮ್ಮಿಂದ
ಸರುವ ಬಳಗೆಲ್ಲ ಮರತೇನ

ಎನ್ನುವಲ್ಲಿ ಗಂಡನ ಮೇಲಿಟ್ಟಿರುವ ಆಕೆಯ ಭಕ್ತಿ-ಪ್ರೀತಿ-ವಿಶ್ವಾಸಗಳು ಎದ್ದುಕಾಣುತ್ತವೆ.

ಅಂಗೀಯ ತೊಟ್ಟಾರ ಅಂಗಾಲಗೆರಿವಾಟ
ಚಂಗ ಬಿಟ್ಟಾರ ಗರಿಗರಿ | ಇನಿಯಾರು
ಸಿಂಗಾರಾಗ್ಯಾರ ಸದನಕ

ಈಗ ಗಂಡನ ವರ್ಣನೆಯೇ-ವರ್ಣನೆ. ಗಂಡ ಹೇಗಿದ್ದರೂ ಆಕೆಗೀಗ ಆತನೇ ಬಂಗಾರ. ಅರಸನ ದಯೆದಿಂದ ತನಗೆ ಎಲ್ಲಾ ಸಿಕ್ಕಿದೆ ಎಂದು ಹೆಮ್ಮೆ ಪಡುತ್ತಾಳೆ.

ಅರಸರ ದಯದಿಂದ ಅರಿಸೀಣ ಕುಂಕುಮ
ಗೋದಮಲ್ಲೀಗಿ ನನೆದಂಡೆ | ಕಟ್ಟೊದು
ಅರಸ ಮಾರಾಯ್ರ ದಯದಿಂದ

ಗಂಡನ ದಯೆಯಿಂದಲೇ ತನಗೆ ಇಷ್ಟೆಲ್ಲಾ ಸೌಭಾಗ್ಯ ದೊರಕಿ-ತೆಂದು ಹಾಡಿ ಹರಸುತ್ತಾಳೆ, ಕುಣಿದು ನಲಿಯುತ್ತಾಳೆ. ಇದೇ ನಿಜವಾದ ಹೆಂಡತಿಯಾದವಳು ಪಡುವ ಆನಂದ, ಹೊಂದುವ ಐಸಿರಿ.

ಗಂಧೆಣ್ಣಿ ಹಚಗೊಂಡು ಗಂಗ್ಯಾಗ ನಿಂತಾರ
ಒಂದೊಂದು ಹೇಳಿ ನಗತಾರ | ರಾಯರಿಗೆ
ಎಂಥ ಸಿರಿಗಂಗಿ ಹಡೆದಾಳ

ಇಂತಹ ಪತಿಯನ್ನು ಕರುಣಿಸಿದ ತನ್ನ ಅತ್ತಿಗೆ ಕೂಡ ಹಾಡಿ ಹರಿಸುತ್ತಾಳೆ. ಆತನೂ ಕೂಡ ಈಕೆಯನ್ನು ಹೂವಿನಂತೆ ಜೋಪಾನ ಮಾಡುತ್ತಾನೆ.

ಹಾಸೀಗಿ ಹಾಸೆಂದ ಮಲ್ಲೀಗಿ ಸೂಸೆಂದ
ಬ್ಯಾಸತ್ರ ಮಡದಿ ಮಲಗಂದ। ಚೆಂಜಿಕಿ
ತನ್ನೋಡಿ ತವರ ಮರೆಯಂದ

ಪ್ರೀತಿ ಬೆಳೆದು ಪ್ರೇಮವಂಕುರಿಸಿ ಪ್ರಣಯದ ಪಲ್ಲವಿ ಇಬ್ಬರಲ್ಲಿಯೂ ನಾಂದಿ ಹಾಡುತ್ತದೆ. ಒಬ್ಬರ ಮೇಲೊಬ್ಬರ ದೃಷ್ಟಿ ಏಕತಾನತೆ ಹೊಂದಿ ಬಯಸಿದ್ದು ಬರುತ್ತದೆ, ಇಚ್ಛಿಸಿದ್ದು ಸಿಗುತ್ತದೆ. ಹೃದಯ ಹೃದಯಗಳ ಆ ಮಿಲನ ದೈಹಿಕ ಸುಖದಲ್ಲಿ ಕರಗಿ ತೇಲಾಡುತ್ತದೆ. ಅದೇ ನಿಜವಾದ ದಾಂಪತ್ಯ ಅದೇ ಜೀವನದ ಐಸಿರಿ.

ಹಣಚಿಬಟ್ಟಿನ ಕೈಯ ಒತ್ತಿ ಹಿಡಿಯಲುಬ್ಯಾಡ
ನೆತ್ತರಿಳಿದಾವು ಬೆರಳೀಗೆ। ನನರಾಯ
ಅತ್ತಿ ಬೈದಾಳೊ ಕೈ ಬಿಡೊ

ಗಂಡನಿಂದ ಕೈಬಿಡಿಸಿಕೊಂಡು ಹೋಗುವ ಹೆಂಡತಿಗೆ ಅತ್ತೆಯೊಬ್ಬಾಕೆ ಸಹಾಯಕಾರಿ. ಆಗ ಹಿಡಿದ ಕೈಯನ್ನು ಗಂಡ ಅದ್ಹೇಗೆ ಬಿಟ್ಟಾನು.

ಕಾಮ ಕಸ್ತೂರಿ ನಿನ್ನ ಕಾಣದಲೆ ಇರಲಾರೆ
ಮಲ್ಲೀಗಿ ಮಾಯೆ ಬಿಡಲಾರೆ। ಸಮುದರದ
ಮುತ್ತಾ ನಿನ್ನಗಲಿ ಇರಲಾರೆ.

ಎಂದು ಮತ್ತೆ ಅಪ್ಪಿಕೊಳ್ಳುತ್ತಾನೆ, ಮುದ್ದಿಸುತ್ತಾನೆ ಪ್ರಣಯದ ಮಳೆಗರೆಯುತ್ತಾನೆ. ಆಗ ಇಬ್ಬರಿಗೂ ಹಿತ ಎಲ್ಲರಿಗೂ ಖುಷಿ.

ಹೀಗೆ ಸಮರಸವಾಗಿ ಸಂಪದ್ಭರಿತವಾಗಿ ಸಾಗಿದ ಅವರ ಬಾಳು ಕಾಳಾದಾಗ ವಿರಹವೆಂಬುದು ಬಂದು ಈ ದಂಪತಿಗಳನ್ನು ಕಾಡದೇ ಬಿಡುವದಿಲ್ಲ. ಮೊದಲ ಸಲ ಗಂಡನ ಮನೆಗೆ ಬಂದ ಗರತಿಗೆ ತವರು ಮನೆಯವರು ಕರೆಯಲು ಬಂದಾಗ ಯಾಕಾದರೂ ಇಷ್ಟು ಬೇಗ ಬಂದರೊ ಎಂದು ಮನದಲ್ಲಿಯೇ ಅವರನ್ನು ಶಪಿಸು ತ್ತಾಳೆ.

ಹಚ್ಚಡದ ಪದರಾಗ, ಅಚ್ಚಮಲ್ಲಿಗಿ ಹೂವ
ಬಿಚ್ಚಿ ನನಪ್ಯಾಲ ಒಗೆವಂಥ। ರಾಯರನ
ಬಿಟ್ಟ್ಯಾಂಗ ಬರಲೆ ಹಡದವ್ವ

ಎಂದು ತಾಯಿಗೆ ಕೇಳುತ್ತಾಳೆ. ಹೆತ್ತ ತಾಯಿ ತಂದೆಗಳನ್ನೇ ಮರೆಸುವಂತಹ ಶಕ್ತಿ ಈ ಪ್ರಣಯಕ್ಕಿದೆ. ಅಂತೆಯೇ ಹದಿನಾರು –ಹದಿನೆಂಟು ವರುಷ ತವರುಮನೆಯಲ್ಲೇ ಹುಟ್ಟಿ-ಬೆಳೆದ ಒಂದು ಹೆಣ್ಣು ಮದುವೆಯಾದ ನಂತರ ಬೇರೊಬ್ಬರ ಮನೆಯನ್ನು ಹೊಕ್ಕು ಅದನ್ನೇ ತನ್ನ ನಿಜವಾದ ಮನೆಯನ್ನಾಗಿ ಮಾಡಿಕೊಂಡು ಪತಿಯ ಸಂಗಡ ಸುಖ ದುಃಖ ಹಚ್ಚಿಕೊಂಡು ಬಾಳು ಸಾಗಿಸುವ ಆ ಗರತಿಯ ಹಿರಿದಾದ ಗುಣ ದಾಂಪತ್ಯ ಜೀವನದಲ್ಲಿ ಹಚ್ಚಿಟ್ಟ ನಂದಾದೀಪ.

ತವರು ಮನೆಗೆ ಹೋದ ಹೆಂಡತಿಯ ನೆನಪು ಮಾಡಿ ಕೊಳ್ಳುತ್ತ ಕುಳಿತ ಗಂಡನಿಗೆ ತಾಯಿ-ತಂಗಿಯರು ಮಾಡಿದ ಅಡುಗೆ ರುಚಿಸುವದೇಯಿಲ್ಲ.

ಅಡಗೀಯ ಮನಿಯಾಗ ಮಡದೀಯ ಸುಳುವಿಲ್ಲ
ಅಡಗಿ ಬಾಯೀಗಿ ರುಚಿಯಿಲ್ಲ। ಹಡದವ್ವ
ಮಡದಿ ತವರೀಗಿ ಹೋಗ್ಯಾಳ

ಇಲ್ಲಿಯವರೆಗೂ ತಾಯಿಯೇ ಮಾಡಿದ ಅಡಿಗೆಯನ್ನು ಉಂಡ ಆತನಿಗೆ ಮಡದಿಯ ಕೈಯಡಿಗಿನ ಅಡುಗೆ ಉಂಡಾಗಿನಿಂದ ಇನ್ನು ಬೇರೆಯವರು ಮಾಡಿದ್ದು ರುಚಿಸದು. ಪ್ರೇಮದಿಂದ, ನಗುಮೊಗದಿಂದ ಶೃಂಗಾರಯುತವಾಗಿ ಬಳುಕುತ್ತ, ಒಲ್ಲೆಂದರೂ ಒತ್ತಾಯ ಮಾಡಿ ನೀಡುತ್ತ ರುಚಿಕರವಾದ ಅಡುಗೆಮಾಡಿ ಬಡಿಸುವ ಹೆಂಡತಿಯತ್ತ; ಇದ್ದದ್ದನ್ನು ಇದ್ದಹಾಗೆ ನೀಡುವ ಉಳಿದವರೆತ್ತ; ಅಂತಯೇ ಆತನಿಗೆ ತನ್ನ ಹೆಂಡತಿ ಬರುವವರೆಗೂ ಊಟ ರುಚಿಸುವದಿಲ್ಲ; ಮೈಮನ ತೃಪ್ತಿಗೊಳ್ಳುವದಿಲ್ಲ.

ಎಲ್ಲೆಲ್ಲಿ ನೋಡಿದರ ನಲ್ಲನಂಥವರಿಲ್ಲ
ಹಲ್ಲು ನೋಡಿದರ ಹವಳವ | ನಲ್ಲನ
ಸೊಲ್ಲು ಕೇಳಿದರ ಸಮಾಧಾನ
ಎರಿಹೊಂಟ ಬರಿಗಾಲ ನಡುವೆ ನಗ್ಗಿಲುಮುಳ್ಳ
ರಾಯ ನಿಮ ಚುಚ್ಚಿ ಬರುವಾಗ | ಓಂದೀನ
ನೆನಪಾಗಿ ಜೀವ ಹೋದೀತ

ಎಂದು ತವರುಮನೆಯಲ್ಲಿ ಕುಳಿತುಕೊಂಡೇ ಗಂಡನ ನೆನಪನ್ನು ಮರುಕಳಿಸುತ್ತಾಳೆ. ಮಾತು-ಮಾತಿಗೆ ಗಂಡನ ವರ್ಣನೆ ಮಾಡಿ ತನ್ನ ಗೆಳತಿಯರ ಮುಂದೆ ಬಣ್ಣಿಸುತ್ತಾಳೆ.

ಬಿಳಿಜ್ವಾಳ ಹೊಲದಾಗ, ಎಳೆಯ ಸವತಿಕಾಯಿ
ಹರಿ ಅಂದರ ಹ್ಯಾಂಗ ಹರಿಯಲಿ | ಅರಸರ
ಮರಿ ಅಂದರ ಹ್ಯಾಂಗ ಮರಿಯಲಿ

ಎಂದು ಮನಬಿಚ್ಚಿ ತನ್ನ ಅಂತರಂಗದ ಮಿಡಿತವನ್ನು ತೋಡಿಕೊಳ್ಳುತ್ತಾಳೆ, ಹಾಡಿಕೊಳ್ಳುತ್ತಾಳೆ.

ತವರಿಗೆ ಹೋದ ಮಡದಿ ಬರುವದು ತಡವಾದರೆ ಕತ್ತಲಿರಲಿ-ಕವಳವಿರಲಿ: ಅಮವಾಸೆಯಿರಲಿ-ಗ್ರಹಣ ಹಿಡಿದಿರಲಿ; ಮಳೆ

ಬಂದಿರಲಿ-ಹಳ್ಳಕಟ್ಟಿರಲಿ ಗಂಡನ ಮನಸ್ಸು ಕೇಳುವದಿಲ್ಲ. ರಾತ್ರಿ-ರಾತ್ರಿಯಲ್ಲೇ ನಡೆದು ಹೆಂಡತಿಯನ್ನು ಕೂಡುತ್ತಾನೆ. ಹೀಗೆ ದಾಂಪತ್ಯದಲ್ಲಿ ಬರುವ ಈ ಅಗಲುವಿಕೆಯನ್ನು ಎದುರಿಸಬೇಕಾದರೆ ಬಹಳ ಕಷ್ಟ ಕೂಡಿದ್ದಾಗ ಸಿಗುವ ಹಿತವೇ ಬೇರೆ.

ಕೂಲಿಮಾಡಿದರೇನ, ಕೋಲಿಹೊತ್ತರೇನ
ನನಗ ನಮರಾಯ ಬಡವೇನ | ಬಂಗಾರ
ಮಾಲು ಇದ್ದಾಂಗ ಮನೆಯಾಗ

ಎನ್ನುವ ಗರತಿಯಮಾತು ಸತ್ಯಪೂರ್ಣವಾದುದು. ಹಣ ಶ್ರೀಮಂತಿಕೆ – ಅಧಿಕಾರ – ಅಂತಸ್ತುಗಳು ಪ್ರೇಮದ ಮುಂದೆ ಯಾತಕ್ಕೂ ಬಾರದವುಗಳು. ಹಣದಿಂದ ಅವರು ಬಡವರಿರ ಬಹುದು. ಆದರೆ ಹೃದಯ ಶ್ರೀಮಂತಿಕೆ ಒಲವಿನ ಒರತೆ ಅವರಲ್ಲಿ ಸಾಕಷ್ಟಿರುತ್ತದೆ. ಹೀಗಿರುವಾಗ ಅಂತಹ ದಂಪತಿಗಳಿಗೆ ಬದುಕೇ ಬಂಗಾರವಾಗುತ್ತದೆ; ಪ್ರಣಯವೇ ಐಸಿರಿಯನ್ನು ತಂದು ಕೊಡುತ್ತದೆ. ಹೀಗೆ ಪರಸ್ಪರ ಅನ್ಯೋನ್ಯವಾಗಿ ಕೂಡಿದ ದಂಪತಿ ಗಳು ಒಬ್ಬರಿಗೊಬ್ಬರು ಅರಿತುಕೊಂಡು ಸುಖ ಕೊಡುವದರಲ್ಲಿ – ಪಡೆಯುವದರಲ್ಲಿ ಯಶಸ್ವಿಯಾಗುತ್ತಾರೆ. ಸರಸ – ಸಲ್ಲಾಪದಿಂದ ಸ್ವರ್ಗ ಸುಖದಲ್ಲಿ ತಲ್ಲೀನರಾಗುತ್ತಾರೆ.

ಜನಪದ ಕವಿಗಳಲ್ಲಿಡಗಿರುವ ವೈಭವಯುತವಾದ ಕಾವ್ಯ ಶಕ್ತಿ ನಿಜಕ್ಕೂ ಶ್ಲಾಘನೀಯ ಹಾಗೂ ಅನುಕರಣೀಯ. ಅಲ್ಲಿ ಕಾವ್ಯಕನ್ನಿಕೆ ಮೈದೆಗೆದು ಮೆರೆದುದನ್ನು ಎಂತವರಾದರೂ ಗಮನಿಸದೇಯಿರಲಾರರು. ಪ್ರಣಯಿಗಳ ಪ್ರಸ್ತಾಪ ವಿವರಿಸು ವಾಗಂತೂ ಈ ಕಲ್ಪನೆ ಗರಿಗೆದರಿ ನಿಂತು ಚೆಲುವಾದ ಹೂ ಬಿಡುತ್ತದೆ.

ಹೀಗೆ ಅರಳಿ ಘಮ – ಘಮಿಸುವ ದಾಂಪತ್ಯದಲ್ಲಿ ಗಂಡ ಎಲ್ಲಿಗಾದರೂ ಹೊರಟನೆಂದರೆ ಎಂದು ಬರುವನೋ ಏನೋ ಎಂದು ಹೆಂಡತಿ ಕೇಳಲು ಕಾತುರಳಾಗಿರುತ್ತಾಳೆ.

ಎಂದ ಬರತಿರಿ ನನ್ನ ಗಂಧsದ ರತಿಗಾರ
ರುಮ್ಮಾಲ ಎಲ್ಲ ಪರಿಮಾಳ | ನನ ಸಲ್ಲಿ
ಎಂದ ಬರತೀರಿ ನನಗ್ಹೇಳ.

ನಿರ್ದಿಷ್ಟವಾಗಿ ಆದಷ್ಟು ಬೇಗನೇ ಬರುವ ದಿನವನ್ನು ತಿಳಿಸೆಂದು ಕೇಳುತ್ತಾಳೆ. ಬೇಗ ಬರಲೇಬೇಕೆಂದು ಆರ್ಡರ್ ಮಾತ್ರ ಮಾಡುವ ದಿಲ್ಲ. ಆದರೆ ಆಕೆ ಹೇಳುವ ಮುಂದಿನ ಈ ಹೇಳಿಕೆಯನ್ನು ಗಮನಿಸಿದಾಗ

ಕಾಣದಲೆ ಇರಲಾರೆ. ಕನ್ನಡಿ ಮುಖದವರ
ಕಾಮsನಗಿಂತ ಬಲುಚೆಲುವ । ಚೆನ್ನಿಗರ
ಕಾಣದರಗಳಿಗೆ ಇರಲಾರೆ

ಎನ್ನುವ ವಿಚಾರ ಬೇಗನೇ ಬರಬೇಕೆಂಬುದು ಆಂತರಿಕವಾಗಿ ಧ್ವನಿಸುತ್ತದೆ. ಅಂತೆಯೇ 'ಕಾಂತಾಸಮ್ಮಿತ' ಬಹಳ ಆಕರ್ಷಕ ವಾದುದು ನೇರವಾಗಿ ಅಪ್ಪಣೆಮಾಡದಿದ್ದರೂ ಆಕೆ ಹೇಳುವದ ಕ್ಕಿಂತ ಮುಂಚೆಯೇ ಆಕೆಯ ಬಯಕೆಯನ್ನು ಆತನ ಮನಸ್ಸು ಪೂರೈಸಿ ಬಿಟ್ಟಿರುತ್ತದೆ. ಅದೇ ನಿಜವಾದ ಪ್ರೇಮ. ಅದಕ್ಕೇ ಕರೆಯುವದು ದಾಂಪತ್ಯ ಬದುಕಿನ ಮಧುರಘಟ್ಟವೆಂದು.

ಹೀಗೆ ಊರಿಗೆ ಹೋದ ಗಂಡನ ನೆನಪಾಗಿ ಹೆಂಡತಿ ಪಡುವ ಕಷ್ಟ ಅಷ್ಟಿಷ್ಟಲ್ಲ.

ಯಾಕವ್ವ ನಿನ ಜೀವ ಜಾಚೇಲಿ ಒಲ್ಲsದ
ಜಾತ್ರಿಗ್ಹೋದವರು ಬರಲಿಲ್ಲ। ಇಂದೀನ

ರಾತ್ರಿ ಹ್ಯಾಂಗರ ಕಳೆಯಲಿ
ವಾರೀಗಿ ಪುರುಷರು ಉರೀಗಿ ಹೋದರ
ನಾರಿ ನಿನ ಕಣ್ಣ ಒಳಹೊರಗ। ತಿಂಗಳದ
ಚಂದ್ರಾಮರ್‍ಯಾಕ ತಡದಾರ

ದಿನಾಲು ಜಾಚಿ-ಎಲಿ ಹಾಕಿಕೊಂಡು ಸಂತಸ ಪಡುವ ಆಕೆಗೆ ಗಂಡ ಮನೆಯಲ್ಲಿ ಇಲ್ಲದ್ದಕ್ಕಾಗಿ ಎಲ್ಲವೂ ಬೇಡವಾಗಿದೆ. ಆತನ ಹಾದಿಯನ್ನು ನೋಡುತ್ತಾ

ಅರಸ ಹೋದಲ್ಲೆಲ್ಲ ಹರುಷವಾಗಿರಲೆವ್ವ
ಸಿರಿಗಂಧಮರವು ನೆರಳ ಕೊಡಿ। ಓಡಿದಿರಲಿ
ಉರಿಬಿಸಿಲ ಮೋಡ ತಡೆದಿರಲಿ

ಎಂದು ಹಾರೈಸಿ ನಿಮಿಷ-ನಿಮಿಷಕ್ಕೂ ದಾರಿಕಾಯುತ್ತಾಳೆ -ಕಾತರಿಸುತ್ತಾಳೆ-ಕಳವಳಗೊಳ್ಳುತ್ತಾಳೆ.

ಈ ರೀತಿಯಾಗಿ ದಾಂಪತ್ಯಜೀವನ ಸರಿಯಾಗಿ ನಡೆದರೆ ಬಹಳ ಮಧುರ ಅತ್ಯಂತ ಸಿಹಿ. ತಾಳು ತಪ್ಪಿತೆಂದರೆ ಬಹಳ ಕಷ್ಟಮಯವಾಗುತ್ತದೆ.

ಗಂಡ-ಹೆಂಡತಿ ಒಂದುನಾಣ್ಯದ ಎರಡು ಮುಖಗಳಂತೆ ಒಂದು ಬಂಡಿಯ ಎರಡು ಗಾಲಿಗಳಂತೆ. ಒಂದು ತಪ್ಪಿತೆಂದರೆ ಸಾಕು ಇನ್ನೊಂದರ ಸಾರ್ಥಕತೆ-ಸಮರ್ಪಕತೆ ಕುಗ್ಗಿ ಹೋಗಿ ಬದುಕೇ ಬರಡಾಗುವ ಸಂಭವವುಂಟು

ಇಬ್ಬರೂ ಸುಖ-ದುಃಖಗಳನ್ನು ಸಮ-ಸಮವಾಗಿ ತೆಗೆದುಕೊಳ್ಳುತ್ತ ಸಾಗಿದರೆ ದಾಂಪತ್ಯ ಜೀವನ ಹೂವಿನಷ್ಟು ಹಗುರ-ಜೇನಿನಷ್ಟು ಮಧುರ. ದಂಪತಿಗಳ ಪ್ರಣಯ ಹಚ್ಚಿಟ್ಟ ದೀಪದಂತೆ ಚಿರಂತನ-ಸರಿಯಾಗಿ ನಡೆಯುವ ದಂಪತಿಗಳ ಪ್ರಣಯಸನ್ನಿವೇಶ

ನೋಡುವವರ ಕಣ್ಣಿಗೆ ವರ್ಣರಂಜಿತ, ಕೇಳುವವರ ಕಿವಿಗೊಂದು ಇಂಪುಗಾನ.

೭. ಮುದಕಾ-ಮುದಕಿಯರ ಪ್ರಣಯ

'ಹುಂಚೀಗಿಡ ಮುಪ್ಪಾದರೂ ಹುಳಿ ಮುಪ್ಪಲ್ಲ' ಎನ್ನುವ ಗಾದೆಯಂತೆ ಮುದಕಾ–ಮುದಕಿಯರ ಪ್ರಣಯ ಬಹಳ ವಿನೋದ ಮಯವಾದುದು. ಹರೆಯದವರ ಹಾಗೆ ಎದ್ದು ಕಾಣುವ ಪ್ರಣಯ ಲಕ್ಷಣಗಳು ಅವರಲ್ಲಿ ಕಂಡುಬರದಿದ್ದರೂ ಸುಮ್ಮನೇ ಟೈಮ್‌ಪಾಸ್ ಸೋಂಗಾದಂತೆ ಅವರು ಮೆಲಕು ಹಾಕುವ ಹಳೆಯ ನೆನಪುಗಳು ರಸಪೂರ್ಣವಾದವುಗಳು.

ಮುದಕಾ–ಮುದಕಿಯರು ಹೆಚ್ಚು ಹೊತ್ತು ಚೇಷ್ಟೆ ಮಾಡುತ್ತ ಕುಳಿತರೆ ಹರೆಯದವರು ನಗಲಿಕ್ಕೆ ಪ್ರಾರಂಭಿಸುತ್ತಾರೆ. ಆಗ ಓಣ್ಯಾನ ಕೆಲ ಯುವತಿಯರು 'ಹಂಗಾಮ ಹೋದ ಮ್ಯಾಲ ನಿಂಗಮ್ಮ ಬಸರಾದಾಂಗ' ಎಂದು ಹಾಸ್ಯಮಾಡುತ್ತಾರೆ.

ಹಳ್ಳದ ದಂಡೀಗಿ ಹಾಂವ ಮೆಂಕಿಯಕಾಯಿ
ಹಣ್ಣಂತ ಕಡಿದೀ ಖಿಸಗಾಯಿ | ಎಲೋ ಜಾಣ
ಮಿಂಡಂತ ಹ್ವಾದಿ | ಮುದಕೀಗೊ

ತಮ್ಮ ಗೆಣೆಯರಿಗೆ ಹರೆಯದ ಗೆಣತಿಯರು ಹೇಳುವ ಮಾತಿದು. ಹಾವ ಮೆಂಕಿಯಕಾಯಿ ನೋಡಲು ಸವತಿಯ ಕಾಯಿಯ ಹಾಗೆ ಕಂಡರೂ ಕಡಿದು ನೋಡಿದರೆ ಕೆಟ್ಟ ವಿಷ. ಹಾಗೆ ಮುದುಕಿಯರ ಸಂಗ–ರುಚಿ ಇಲ್ಲದ್ದು ಎಂದು ಹೋಲಿಕೆ ಕೊಟ್ಟು ಹೇಳಿಪಲ್ಲಿಯ ಅವರ ಜಾಣತನ ಸೂಕ್ಷ್ಮ ಪರಿಜ್ಞಾನ ಯಾರಿಗಾದರೂ ತಿಳಿಯು ತ್ತದೆ.

ಮುದಕಾ ಮುದಕಿ ಕೂಡಿ, ಮುದಕವಿ ಸಂತಿಗ್ಹೋಗಿ
ಮುದಕಿ ಬೇಡ್ಯಾಳ ಕುಲಾಯಿ। ಆ ಮುದುಕ
ಕಟಬಗರಿ ಕಂಡು ಅಳತಾನೊ
ಮುದಕಾ ಮುದಕೇರು ಕೂಡಿ ಬದಕ ಬಾಗ್ಯೇವಮಾಡಿ
ಮುದಕಿ ಬೇಡ್ಯಾಳ ಹುವ್ವಾಬುಗುಡಿ। ಬಾಲಕಿಯು
ಮುದಕ ಬೇಡ್ಯಾನ ಹೊಳಿಬೆಂಡ

ಎನ್ನುವಲ್ಲಿ ಮುದುಕ–ಮುದುಕಿಯರ ವಿನೋದಮಯ ಜೀವನ ಹಾಸಾಗಿ ಹೊಕ್ಕಿರುವದನ್ನು ಯಾರಾದರೂ ಮನಗಾಣಬಹುದು. 'ಐವತ್ತು ಮೀರಿದರ ಅರವಾ–ಮರವು' ಎನ್ನುವಂತೆ ವಯಸ್ಸಾದ ವರಿಗೆ ವ್ಯವಹಾರ ಲೆಕ್ಕತಪ್ಪಿದರೂ ಪ್ರಣಯದ ಲೆಕ್ಕ ತಪ್ಪುವದಿಲ್ಲ. ಇಂದಿಗೂ ಕೂಡ ಹಳ್ಳಿಯಲ್ಲಿ ನಾವು ನೋಡಿದಾಗ ಎಷ್ಟೋ ಶ್ರೀಮಂತ ಮುದುಕರು ಇನ್ನೂ ಹರೆಯದ ಹುಡುಗಿಯರನ್ನು ಮದುವೆಯಾಗುವದನ್ನು ನೋಡಿದರೆ ಈ ಮಾತು ಸತ್ಯವೆನಿಸು ತ್ತದೆ. ಬಾಲೆಯೊಬ್ಬಳು ಮುದುಕನನ್ನು ಮದುವೆಯಾಗಿ ಪಡುವ ಫಜೀತಿಯನ್ನು ಇಲ್ಲಿ ನೋಡಬಹುದು;

ಮುಪ್ಪಿನ ಮುದುಕಗೆ ಕೊಟ್ಟಾರೆ ತಾಯ್ತಂದೆ
ಮುಟ್ಟಬೇಡಜ್ಜ ಮುದಿಯಜ್ಜ। ನಾ ನಿನಗೆ
ಚೊಚ್ಚಲ ಮಗಳಾಗಿ ಇರುತೀನಿ

ಎಂದು ಆ ಬಾಲೆ ಹಂಬಲಿಸಿ ಬಾಯಬಿಟ್ಟು ಕೇಳಿಕೊಂಡರೆ

ನೀನ್ಯಾರಿಗೆ ಚೊಚ್ಚಲು? ನೀನ್ಯಾರಿಗೆ ಮರ್ಚಲು?
ಮುಪ್ಪಿಗೆ ಸಿಕ್ಕ ಮಿಟಗಾಣಿ। ಹುಂಚಿಮರ
ಮುಪ್ಪಾದರೆ ಹುಳಿಯೇನು ಕಡಿಮಿ

ಎಂದು ಕೇಳುವಲ್ಲಿ ಮುದುಕನ ಕಸುವು ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಮಾಡಿಕೊಂಡ ತಮ್ಮ ಹೆಂಡಂದಿರನ್ನು ಬಿಟ್ಟು ಹರೆಯದ ಹುಡುಗಿಯರನ್ನು ಹಿಂಬಾಲಿಸುವ ಮುದುಕರಿಗೇನೂ ನಮ್ಮಲ್ಲಿ ಕೊರತೆಯಿಲ್ಲ.

ಬಂಡಿ ಬಂಟಕ ಮೂಲ ಮಿಂಡಿ ಮುದುಕಗ ಮೂಲ
ಹಿಂಬಂಡಿ ಮೂಲ ಬಸವಗ। ಹಾರಾರುಡುಗಿ
ರಂಡ್ಯಾದ್ರು ಮೂಲ ತವರೀಗೆ

ಎನ್ನುವ ಈ ನುಡಿಯೂ ಕೂಡ ಅದನ್ನೇ ಧ್ವನಿಸುತ್ತದೆ. ಮೀಸೆ ಬೆಳ್ಳಗಾದರೂ ಕಪ್ಪು ಹಚ್ಚಿ ತಿದ್ದಿ ಹುರಿಗೊಳಿಸಿ ಹರೆಯದವರ ಹಾಗೆ ಕ್ಯಾಕರಿಸಿ ನಡೆಯುವ ಮುದುಕರನ್ನು ಕಂಡರೆ ಒಂದು ತೆರನಾದ ಮೋಜೆನಿಸುತ್ತದೆ. ಅವರು ವಯಸ್ಸಿನಿಂದ ಮುದುಕರಾಗಿದ್ದರೂ ಠೀವಿ, ಎಮುಕು, ಚೈನಿ ಇವುಗಳಿಂದ ಹರೆಯದವರಿಗಿಂತ ಕಡಿಮೆಯಿರುವದಿಲ್ಲ. ಹಾಗೆ ನೋಡಿದರೆ ಇಂದಿನ ಹರೆಯದವರೇ ದಾಡಿ-ಕೂದಲು ಬಿಟ್ಟು ಮುದುಕರ ಹಾಗೆ ಕಾಣಿಸುತ್ತಾರೆ. ಕರಾಪ ಮಾಡಿಸಿ ಇಳಿಯುವ ಹಾಗೆ ಎಣ್ಣೆಹಚ್ಚಿಕೊಂಡು ಮೆರೆವ ಮುದುಕರೇ ಹರೆಯದವರ ಹಾಗೆ ಕಾಣುತ್ತಾರೆ. ಅಂದ ಮೇಲೆ ಪ್ರಯಣಕ್ಕೆ ವಯಸ್ಸಿನ ನಿರ್ಬಂಧವೆಲ್ಲಿ?

ಓಣಿಯಲ್ಲಿಯ ಬಡವನ ಹೆಂಡತಿಯೊಬ್ಬಳು ಕಣ್ಣು-ಮೂಗಿಲ್ಲೆ ಚಂದ ಕಂಡರೆ ತೀರಿತು ಈ ಮುದುಕರಿಗೆ ಹರೇವು ತಿರುಗುತ್ತದೆ.

ಬಡವ್ಯಾನ ಹೆಂಡತಿ ನಡಗೀಲೆ ಸುಂದ್ರಿ
ಓಣ್ಯಾನ ಮುದುಕೊಬ್ಬ ನೆದರಿಟ್ಟು। ಕೇಳ್ಯಾನ
ಕಡ್ತಾ ಕೊಡು ಬಾಲಿಕುಡಿಹುಬ್ಬ

ಕಡ್ಡಾನ ಕೊಡಲಾಕ, ಕಡ್ಲೆಲ್ಲಾಗೋದೆಲ್ಲ
ನಿನಕಿಂತ ದುರಸ ಮನಿಪುರುಸ। ಕೇಳಿದರ
ಕರಿಕಬ್ಬ ಮಾಡಿ ಕಡಿದಾನ

ಕುಡಿ ಹುಬ್ಬು ಕಡಕೇಳಿ ಆ ಹುಡುಗಿಯಿಂದ ಹೂ ಮುಡಿಸಿಕೊಳ್ಳ ಬೇಕಾದರೆ ಮುದುಕರ ಪೊಗರು ಎಷ್ಟಿರುತ್ತದೆ ಎಂಬುದು ಗೊತ್ತಾಗದೇಯಿರದು.

ತನ್ನ ಗಂಡ ಕರಿಕಬ್ಬ ಮಾಡಿ ಕಡದಾನು ಎಂದು ಎಚ್ಚರಿಸುವ ಹೆಂಗಳೆಯರು ಬದುಕಿರುವದರಿಂದಲೇ ಮುದುಕರ ಹಾವಳಿ ತಗ್ಗಿದೆ. ಇಲ್ಲದಿದ್ದರೆ ಅವರಾಟ ಹೇಳಲಸಾಧ್ಯ. ಹಿಂದಿನ ಕಾಲದ ಮುದುಕರು ಮೂರು–ನಾಲ್ಕು ಹೆಂಡಂದಿರನ್ನು ಮಾಡಿಕೊಂಡಿರುವದನ್ನು ನೋಡಿದರೆ ಅವರ ರಸಿಕತನ ತಟ್ಟನೇ ಗೊತ್ತಾಗುತ್ತದೆ. ಹಳ್ಳಿಯಲ್ಲಿಯ ಮುದಕಿಯರೂ ಬಹಳ ಬೆರಕಿತನ ಮಾಡುತ್ತಾರೆ.

ಹೀಗೆ ಮುದುಕಾ–ಮುದುಕಿಯರ ಪ್ರಣಯ ನೋಡುಗರಿಗೊಂದು ನಗೆಯಾಟ, ಕೇಳುಗರಿಗೊಂದು ಹಾಸ್ಯದ ಹೊನಲು.

೮. ಸರಸ–ವಿರಸ

ಗೆಣೆಯಾ–ಗೆಣತಿಯರಲ್ಲಿರುವ ಸರಸಮಯ ಜೀವನ ಬಹಳ ದಿನ ಉಳಿಯುವದಿಲ್ಲ. ಒಂದು ಸಮಯದಲ್ಲಿ ಚಕ್ಕಂದವಾಡುತ್ತಿರುವ ಪ್ರಣಯಿಗಳು ಕೊನೆಗೊಂದು ದಿನ ನೋವುಣ್ಣಲೇ ಬೇಕಾಗುತ್ತದೆ.

ಕೂಡಿದ ಕುಡಿಹುಬ್ಬ ತೀಡಿದ ಚೈತಲಿ
ಕಾಡೀಗಿ ಕಣ್ಣ ಮೀನ್ನಂಗ। ಎಲೆಹುಡುಗಿ
ಜತಿಯಾಗಿ ಹಾದಿ ಕೂಡೇಳ

ಎಂದು ಆಕೆಯನ್ನು ಜತೆಗೂಡಿಸಿಕೊಂಡು ಹೊರಟ ಗೆಳೆಯಾ ಈಗ ಅವಳನ್ನು ನಡುನೀರಿನಲ್ಲಿ ಕೈಬಿಡುವ ಪ್ರಸಂಗ ಬಂದಿದೆ. ಆತನ ತಂದೆ–ತಾಯಿಗಳಿಗೆ ಈ ಸುದ್ದಿ ಗೊತ್ತಾಗುತ್ತದೆ.

ಚಿಕ್ಕಿಯ ಬಳಿಬ್ಯಾಡ ಚೀಟಿನ ಜಂಪರಬ್ಯಾಡ
ನಾನಿದ್ದ ಹೊಲಕ ಬರಬ್ಯಾಡ| ಎಲಿಬಾಲಿ
ಇಲ್ಲದ ಹರಲಿ ತರಬ್ಯಾಡ

'ತನ್ನನ್ನು ಇನ್ನು ಮೇಲೆ ಮರೆತುಬಿಡು' ಎಂದು ನೇರವಾಗಿ ಹೇಳದೇ ಸುತ್ತ–ಬಳಸಿ ಹೇಳುತ್ತಾನೆ. ಆಗ ಅವರ ಬದುಕೇ ಬರಡಾಗುತ್ತದೆ. ದಾರಿಯೇ ಕಾಣದಾಗುತ್ತದೆ. ಈ ತರಹದ ವಿರಸ ಒಂದಾದರೆ ಮತ್ತೊಂದು ಜೋಡಿ ಪ್ರಣಯಿಗಳ ವಿರಸ ಮತ್ತೊಂದು ತರ.

ಅರಿಸೀನ ಬಣ್ಣದ ಮೈಯು ಸರಸ ಸಂಪಿಗಿಹಂಗ
ಗಲ್ಲ ಕಂಡಾವ ನಸುಗೆಂಪ| ಆ ಬಾಲಿ
ಕುಂಕುಮದ ಬಟ್ಟ ಹಣೆಮಾಲ

ಎಂದು ತನಗೆ ಬೇಕಾದಾಗ ಆಕೆಯನ್ನು ಸರಸ–ನುಡಿಗಳಿಂದ ವರ್ಣಿಸಿ ತನ್ನವಳನ್ನಾಗಿ ಮಾಡಿಕೊಂಡ ಹುಡುಗ ಆಕೆಯ ರೂಪ ಸೌಂದರ್ಯಕ್ಕೆ ವನಪು–ವೈಯ್ಯಾರಕ್ಕೆ ಮನಸೋತು

ಕಮಲದ ಹೂ, ನಿನ್ನ ಕಾಣದೆ ಇರಲಾರೆ
ಮಲ್ಲಿಗೆ ಮಾಯೆ ಬಿಡಲಾರೆ| ಕೇದಿಗೆ
ಗರಿ ನಿನ್ನಗಲಿ ನಾ ಇರಲಾರೆ

ಎಂದು ಆಕೆಗೆ ಭಾಷೆ ಕೊಟ್ಟು ಆತ, ಅವಳ ನಡತೆಯ ಬಗ್ಗೆ ಸಂಶಯ ತಾಳಿ ಅವಳ ಮೇಲಿಟ್ಟಿರುವ ಪ್ರಿತಿಯೆಲ್ಲಾ ನೀರಾಗಿ ಹರಿದು ಹೋಗುತ್ತದೆ.

ಅಲ್ಲ್ಯಾಕ ನಿಂತಿದ್ದಿ ಹಲ್ಲ್ಯಾಕ ಕಿಸಿದಿದ್ದಿ
ಚಲ್ಲಿಕೊಂಡೆಲ್ಲಾ ಚುರಮುರಿ। ಎಲೆಹುಡುಗಿ
ಚಲ್ಲಾಪಿಲ್ಲ್ಯಾತ ಗೆಣೆತಾನ

ಈ ನುಡಿಯುನ್ನು ಕೇಳಿದ ಆಕೆಗೆ ಕತ್ತಲು ಕವಿದಂತಾಗುತ್ತದೆ. ತಾನು ಇನ್ನೊಬ್ಬನ ಸಂಗಡ ಸರಸಮಾಡುವದನ್ನು ಕಂಡ ಈತ ತನ್ನನ್ನು ಕೈಬಿಟ್ಟನಲ್ಲಾ ಎಂದು ಮರ-ಮರ ಮರಗುತ್ತಾಳೆ. ಆಗ ಆಕೆಯು ಬದುಕು ವಿರೆಸಮಯವಾಗುತ್ತದೆ.

ಚಿಕನಾರಿ ಹಳದಾಗ ಚೀಪಕಲ್ಲಿನಮ್ಯಾಲ
ಚಿಕ ಚಿಕ್ಕಿ ಕುಬಸಾ ವಗಿತಾಳ | ಆ ಬಾಲಿ
ಬಿಕ ಬಿಕ್ಕಿ ಅಳತಾಳ ಬಿಕನಾಸಿ

ಹೀಗೆ ತನ್ನ ಗೆಣೆಯನನ್ನು ನೆನೆಸಿಕೊಂಡು ಬಿಕ್ಕಿ-ಬಿಕ್ಕಿ ಅಳುವ ಸ್ಥಿತಿ ಬರುತ್ತದೆ. ಆಗ ತಾನು ಮಾಡಿದ ತಪ್ಪು ಅರಿವಾದರೂ ಏನೂ ತೋಚದ್ದಕ್ಕಾಗಿ ಕಂಗಾಲಾಗುತ್ತಾಳೆ. ಹಿಂದೆ ಆ ಗೆಣೆಯ ನೊಡನೆ ಸುಖ ಪಟ್ಟ ದಿನ-ಮಾನಗಳನ್ನೇ ನೆನಪಿಸಿಕೊಂಡು ಕಾಲ ನೂಕುತ್ತಾಳೆ.

ಗೆಣೆಯ ಬಿಟ್ಟರು ಕೂಡ ಗೆಣೆಯನಾಡಿದ ಆಟ
ಮನದಾಗ ಊರಿ ನಿಂತ್ಹಾಂಗ | ಆ ಹುಡುಗಿ
ಚಣ ಚಣಕ ನೆನೆಸಿ ಅಳತಾಳೊ

ಹೀಗೆ ಅವಳ ಜೀವನದಲ್ಲಿ ದುಃಖ ತುಂಬಿರುತ್ತದೆ. ವಿರಸ ಜೀವನ ಪ್ರಾರಂಭವಾಗುತ್ತದೆ.

ಗೆಣೆಯನ್ನ ಕಳಕೊಂಡು ಒಣವಾರಿಮಾಡ್ಕೊಂಡು
ಮಣಿ ಮಣಿಸಿ ಊರ ತಿರಗ್ಯಾಳೊ | ಅಗಸ್ಯಾಗ
ಹಣಿ ಹಣಿ ಬಡೆದು ಅಳತಾಳೊ

ಎಷ್ಟು ಅತ್ತರೂ ದೂರ ಸರಿದ ಗೆಣೆಯ ಮತ್ತೆ ಕೂಡಲಾರ. ಕರುಣೆ ದೋರಿ ಬರಲಾರ. ಆಗ ಹೆಣ್ಣಿಗೆ ಕಾಲುಜಾರಿದ್ದಕ್ಕಾಗಿ ಪಶ್ಚಾತಾಪ ಪಡುತ್ತಾಳೆ. ಹಗಲಿರುಳೂ ದುಃಖಿಸುತ್ತಾಳೆ.

ಗಂಡು–ಹೆಣ್ಣನ್ನು ಕೈಬಿಟ್ಟಾಗ ಉಂಟಾಗುವ ಹೆಣ್ಣಿನ ವಿಷಮ ಬಾಳು ಇದಾದರೆ; ಇನ್ನು ಹೆಣ್ಣು–ಗಂಡಿಗೆ ಕೈಕೊಟ್ಟಾಗ ಆತ ಹುಚ್ಚನಾಗಿ ಬಿಡುತ್ತಾನೆ.

ನಾನು ನನ್ನ ಗೆಣೆಯ ಹೊಳಿಯ ಹಾಯಿನು ಬಾರೊಃ
ಬೆಳ್ಳಿ ಉಂಗುರದ ಬೆಳಕೀಲೆ | ಹಾಯ್ದರ
ತುಂಬಿದ ಗಂಗೆ ಬಯಲಾಗಿ

ಹೀಗೆ ಇಬ್ಬರೂ ಕೂಡಿ ಹೊಳೆಹಾಯ್ದು ಹೊರಟ ಅವರಲ್ಲಿ ಸರಸ ಮಯ ಜೀವನ ಸಾಗಿರುವಾಗ, ಬೇರೆಯವನ ಜತೆ ತನ್ನ ಹೆಂಡತಿ ತಿರುಗುವದು ಗಂಡನಿಗೆ ಗೊತ್ತಾದಾಗ ಆತ ತಾಕೀತಮಾಡುತ್ತಾನೆ ಅಷ್ಟೇ ಅಲ್ಲ ಸಂದರ್ಭ ಬಂದರೆ ಆಕೆಯನ್ನು ಕೊಲೆ ಮಾಡಲೂ ಆತ ಹಿಂದೆ–ಮುಂದೆ ನೋಡುವದಿಲ್ಲ. ನಾವು ಇತಿಹಾಸದ ಪುಟಗಳಲ್ಲಿ ನೋಡುವ ಎಷ್ಟೋ ಯುದ್ಧಗಳು ನಡೆದದ್ದು ಇದೇ ಹೆಣ್ಣಿನ ಸಲುವಾಗಿ. ಗಂಡ ಸಿಟ್ಟಿಗೆ ಬಂದಾಗ ಹೆಣ್ಣು ದಾರಿಗೆ ಬರುತ್ತಾಳೆ. ಆಗ ನಿಸ್ಸಾಹಯಕಳಾದ ಆಕೆ ತನ್ನ ಗೆಣೆಯನಿಗೆ ಮೋಸಮಾಡಿ ಗಂಡನನ್ನು ಕೂಡುತ್ತಾಳೆ.

"ಬೆಲ್ಲಿಲ್ಲ ಗೆಣೆಯ ಬೈಬ್ಯಾಡ। ಮನಿಯಾಗ
ಅನುವಿಲ್ಲ ಗೆಣೆಯ ಬರಬ್ಯಾಡ..."

ಎಂದು ಹೇಳಿದಾಗ ಈಕೆಯನ್ನೇ ನಂಬಿದ ಆ ಗೆಣೆಯನ ಬದುಕು ಬರಡಾಗಿ ಬಿಡುತ್ತದೆ. ನಂಬಿದ ತನ್ನ ಗೆಣತಿ ಕೈಕೊಟ್ಟಾಗ ಆತ ನಿಟ್ಟುಸಿರು ಬಿಟ್ಟು ಸತ್ತು ಹೋಗುವದೂ ಉಂಟು.

ಹೀಗೆ ಗೆಣೆಯ ಗೆಣತಿಯರಲ್ಲಿ ಪ್ರಾರಂಭದಲ್ಲಿದ್ದ ಸರಸ ಮಯ ಜೀವನ ಕೊನೆಯವರೆಗೂ ರಸಮಯವಾಗಿ ತುಂಬಿ ತುಳು ಕುವದಿಲ್ಲ. ಯಾವುದೋ ಕಾರಣದಿಂದ ಆ ಜೇನ್‌ಗೂಡ ಒಡೆದು ಹನಿ-ಹನಿಯಾಗಿ ಸೋರಿ ಬದುಕಿನಲ್ಲಿ ವಿಷಮತೆ, ದುಃಖ ತಲೆದೋರಿ ಕೊನೆಗೆ ಬಾಳು ದುರಂತದಲ್ಲಿ ಮುಕ್ತಾಯವಾಗುವ ಸಂಭವವೂ ಉಂಟು.

ಗೆಣೆಯ ಗೆಣತಿಯರಲ್ಲಿರುವ ಪ್ರಣಯ ಜೀವನ ಈ ತರಹ ದ್ದಾದರೆ, ಗಂಡ-ಹೆಂಡತಿಯರದು ಮತ್ತೊಂದು ತರ. ದಂಪತಿಗಳ ಬದುಕಿನಲ್ಲಿ ವಿರಸಬಂದರೂ ಅದು ಮತ್ತೆ ಸರಸಮಯವಾಗ ಬಹುದು.

ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ
ಲಿಂಗ್ಯಾಕ ನೀರು ಎರಿದ್ಹಾಂಗ। ಹಿರಿಹೊಳಿ
ಗಂಗವ್ವ ಸಾಗಿ ಹರಿದ್ಹಾಂಗ.

ಎಂಬ ತ್ರಿಪದಿ ಇದೇ ಹೇಳಿಕೆಯನ್ನು ಧ್ವನಿಸುತ್ತದೆ. ಕೆಲವೊಮ್ಮೆ ವಿಷಮತೆ ಕಾಲಿಟ್ಟು ಗಂಡ-ಹೆಂಡತಿಯರ ಬದುಕು ಒಡೆದು ಹೋಗಬಹುದು. ಆದರೆ ಒಡೆದ ಬದುಕು ಕೂಡುವದೇ ಹೆಚ್ಚು. ಕಡೆಗಾಗುವದು ಬಹಳ ಕಡಿಮೆ. ಏಕೆಂದರೆ ಮದುವೆ ಸಮಾಜ ನಂಬಿಕೊಂಡಿರುವಂತೆ ಒಂದು ಪವಿತ್ರ ಬಂಧನ. ಆ ಬಂಧನ ಸಡಿಲಾಯಿತೆಂದರೆ ಎಲ್ಲರೂ ಕೂಡಿಸಲು, ಕಟ್ಟಲು ನೆರವಾಗು ತ್ತಾರೆ. ಆದರೆ ಕಷ್ಟಬಂದಾಗ, ವಿರಸ ಕಾಲಿಟ್ಟಾಗ ದಂಪತಿಗಳೂ

ಕೂಡ ಅನಿವಾರ್ಯವಾಗಿ ಸಹಜತೆಯಿಂದ ಅವನ್ನು ಎದುರಿಸಲೇ ಬೇಕಾಗುತ್ತದೆ.

ವಾರೀಗಿ ರಾಯರು ಊರಿಗಿ ಹೋದರ
ಸೇರ ಭಂಗಾರ ತಗೆದಂಗ। ಮಲ್ಲೀಗಿ
ಮುಡಿದು ಅಂಗಳಕ ಒಗೆದಂಗ

ಒಂದು ಗಂಡನ ಬಗ್ಗೆ ಪ್ರೀತಿ ಭಕ್ತಿ ವಿಶ್ವಾಸಗಳನ್ನಿಟ್ಟ ಹೆಂಡತಿಗೆ ಆಕೆಯ ಮನೆಯ ಮಗ್ಗುಲದಾಕೆ ಮನೆ ಒಡೆಸುವ ಒಂದು ಹಾರಕೀ ಸುದ್ದಿಯನ್ನು ತಂದು ಹೇಳುತ್ತಾಳೆ :

ಚಿಂತಾಕು ಇಟಗೊಂಡು, ಚಿಪ್ಪಾಡಿ ಬಳಿವಾಕ
ಚಿಂತಿಲ್ಲ ಏನ ನಿನಗಷ್ಟು। ನಿಮರಾಯ
ಅಲ್ಲೊಬ್ಬ ಕೂಡ ನಗುತಿದ್ದ

ಇದಕ್ಕೆ ಆಕೆ ಧೈರ್ಯಗುಂದುವದಿಲ್ಲ, ಕಳವಳಗೊಳ್ಳುವದಿಲ್ಲ. ಪ್ರಪಂಚದ ಸವಿಯನ್ನುಂಡ ಗರತಿ ತುಂಬಿದ ಹೃದಯದಿಂದ ಹೇಳುತ್ತಾಳೆ.

ನಕ್ಕರ ನಗಲೆವ್ವ, ನಗೆಮುಖದ ಕ್ಯಾದೀಗಿ
ನಾ ಮುಚ್ಚಿ ಮುಡಿವ ಪರಿಮಳ। ದಾಹೂವ
ಆವಳೊಂದು ಘಳಿಗಿ ಮುಡಿಯಲಿ

ಆಗ ಚಾಡಿ ಹೇಳಲು ಬಂದವಳಿಗೆ ಕೆನ್ನೆಗೆ ಬಾರಿಸಿದಂತಾಗುತ್ತದೆ. 'ಅವಳೊಂದು ಘಳಿಗಿ ಮುಡಿಯಲಿ' ಎನ್ನುವ ಆಕೆಯ ಉದಾರತನವಿದ್ದರೂ ತನ್ನ ಗಂಡ ಬೇರೆಯವಳನ್ನು ಕೂಡಿದನಲ್ಲಾ ಎಂಬ ಹಳಹಳಿ ಇದ್ದೇ ಇರುತ್ತದೆ. ಹೊರಗೆ ಹಾಗೆ ಹೇಳಿದರೂ ಗಂಡ ಮನೆಗೆ ಬಂದಾಗ ಕಾಲ್ಹಿಡಿದು ಕೇಳಿಕೊಳ್ಳುತ್ತಾಳೆ.

ಹಣ್ಣs ಹಾಗಲಕಾಯಿ, ಎಣ್ಣ್ಯಾಗ ಕರಿದೇನ
ತಿಂದ್ವsರ ನೋಡ ನನ ರಾಯ| ನನ ಮ್ಯಾಲ
ತಂದಾರ ನೋಡ ಸವತೀಯ

ಈಕೆಯ ಬೇಡಿಕೆ ದೈನಾಸವನ್ನು ಗಂಡ ಒಮ್ಮೊಮ್ಮೆ ಕೇಳದೇ
ಸೂಳೆಯ ಸಂಗಮಾಡಿ ಹೆಂಡತಿಯನ್ನೇ ಮರೆಯುತ್ತಾನೆ. ಇತ್ತ
ಆಕೆಯ ಅತ್ತೆಯ ಕಾಟ ಜಾಸ್ತಿಯಾಗಿ ನಂದನವನದಂತಿದ್ದ ಅವಳ
ಬಾಳು ಕಡುಬಿಸಲಿನ ತಾಪದಂತಾಗುತ್ತದೆ.

ಕರೆದಾರೆ ಓ ಅನ್ನs ಕರಿಯ ಮಾರಿಯಹೆಣ್ಣ
ತಿರುಗಿ ನೋಡಿದರ ಸಿರಿಯಿಲ್ಲ| ನಿಮ್ಮವ್ವ
ಎರಿಮಣ್ಣ ತಿಂದು ಹಡದಾಳ
ಕುಟ್ಟಲಾಗದ ಕೋಡಿ, ಬೀಸಲಾರದ ಹೇಡಿ
ರೊಟ್ಟಿ ಬಡಿಯಂದ್ರ ಬರದೆನುವ| ಉಂಡಾಡಿ
ಮಿಡಿನಾಗ ನಿನಗ ಕಡಿಯಲಿ.

ಇಂತಹ ಅತ್ತೆಯ ಬೈಗಳನ್ನು ತಿಂದ ಗರತಿ ಎದುರಾಡುವದಿಲ್ಲ. ಆಕೆ
ಹೇಳಿದಂತೆಯೇ ಕೇಳುತ್ತಾಳೆ.

ಅಡಗೀಯ ಮನಿಯಾನ ಅರವತ್ತು ಗಂಗಾಳ
ಬೆಳಗತೀನತ್ತಿ ಬೈಬ್ಯಾಡ-ನಮ್ಮವರು
ಸರಮುತ್ತ ಮಾಡಿ ಸಲವ್ಯಾರ

ಎಂದು ದೈನಾಸದಿಂದ ಬೇಡಿಕೊಳ್ಳುತ್ತಾಳೆ. ಆದರೆ ಅತ್ತೆ ಕೇಳುವ
ದಿಲ್ಲ. ಮತ್ತೆ ಅವಳ ಆಕ್ರೋಶ ಹೆಚ್ಚಾಗುತ್ತದೆ.

ಸರಮುತ್ತು ಅಂತ ನಾ ಸೆರಗ್ನಾಗ ಕಟಿಗೊಳಲೆ?
ಹೊರಬಾರs ಇಲ್ಲೆ ಹೆಂಡಿಯ| ಹಡಗೀಯ
ಬರತಾನೇನೀಗ ನಿಮ್ಮಪ್ಪ?

ಅಪ್ಪನ ವಿಷಯ ಬಂದಕೂಡಲೇ ಗರತಿ ಸುಮ್ಮನಿರುವದಿಲ್ಲ. ತನಗೆ ಎಷ್ಟೆಂದರೂ ಅನ್ನಿಸಿಕೊಂಡಿರುತ್ತಿರುವ ಆಕೆಗೆ ತನ್ನ ತಂದೆ–ತಾಯಿಗಳ ನಿಂದೆಯನ್ನು ಕೇಳುವದಾಗುವದಿಲ್ಲ.

ಹೆಂಡೀಯ ಹೊರಲಾಕ ಬಂಡ ಬಡವರ ಮಗಳ?
ಮಂಡಲದ ಹಳ್ಳಿ ಮೂವತ್ತು–ಗೌಡರ ಮಗಳು
ತರುವಾಗ ಅರವು ಇರಲ್ಲಿಲ್ಲ?

ಎಂದು ಎದುರುತ್ತರ ಕೊಟ್ಟಾಗ ಅತ್ತೆಯ ಸಿಟ್ಟು ಮುಗಿಲು ಮುಟ್ಟುತ್ತದೆ. ಮನೆಗೆ ಬಂದ ಕೂಡಲೇ ಮಗನಿಗೆ ಇದ್ದದ್ದು–ಇಲ್ಲದ್ದು ಕೂಡಿಸಿಕೊಂಡು ಹೇಳಿ ನ್ಯಾಯ ಹಚ್ಚಿ ನಿಲ್ಲುತ್ತಾಳೆ. ಹೀಗೆ ದಾಂಪತ್ಯದಲ್ಲಿ ವಿಷ ಬೆರೆತು ಬಾಳಿನಲ್ಲಿ ಬೇಜಾರಾದಾಗ, ಗರತಿ ದುಃಖ ನುಂಗಿ ಸಹಿಸಲಸಾಧ್ಯವಾದಾಗ ತವರಿಗೆ ಹೇಳಿ ಕಳುಹಿಸಿ ತಾಯಿಯನ್ನು ಕರೆಯಿಸಿಕೊಂಡು ತನ್ನ ಬಾಳಿನ ದುಃಖವನ್ನು ತೋಡಿಕೊಳ್ಳುತ್ತಾಳೆ.

ಒಲ್ಲಾದ ಒಗತಾನ ಎಲ್ಲಿತ್ತೊ ಮಗಳೀಗಿ
ಮಲ್ಲಿಗೀಯ ಬಿಸಿಲಿಗೆಸೆದ್ಹಾಂಗ। ಸವಿಬೆಲ್ಲ
ಚೆಲ್ಲಿದಂತಾತು ಬೆಂಕ್ಯಾಗ

ಎಂದು ತನ್ನ ಮಗಳ ಗಂಡನ ಮನೆಯವರನ್ನು ಶಪಿಸುತ್ತಲೇ ಬಂದ ಆ ತಾಯಿ ಮಗಳಿಗೆ ಉಪದೇಶದ ಮಾತು ಹೇಳುತ್ತಾಳೆ. ಅಳು ನುಂಗಿ ನಗು ನಗಲು ಕರೆ ಕೊಡುತ್ತಾಳೆ.

ಚಿಂತಿ ಮಾಡೋದ್ಯಾಕ, ಬೇ ಹುಚ್ಚಿ ಕಂದಮ್ಮ
ನಿಮ್ಮವರ ತ್ವಾಟ ಬಲುತತ್ವಾಟ। ನೋಡಿದರ
ಹಬ್ಬೇತಿ ದೂರ ಎಲ್ಲಿತಾನಾ?

ತ್ವಾಟ ಒಳ್ಳೇದವ್ವ; ಒಳಗ ಗೊರಜೇಪಲ್ಲೆ
ಸೀರಿ ಒಳ್ಳೇದು ಸೆರಗಿಲ್ಲ। ಪುರುಷನ
ಮನ ಪಾಡ ಹೌದು ರಿಣ ಇಲ್ಲ

ಎಂದು ತಾಯಿಯ ಸಮಾಧಾನಕರವಾದ ಮಾತಿಗೆ ತಾನುಂಡ ದುಃಖವನ್ನು ವ್ಯಕ್ತಪಡಿಸುತ್ತಾಳೆ. ಆದರೂ ಹೆಣ್ಣು ಧರಿತ್ರಿಯ ಹಾಗೆ ಶಾಂತ ಗುಣದವಳು. ತನ್ನ ಮಗಳಿಗೆ ಎಷ್ಟೇ ಕಷ್ಟವಿದ್ದರೂ ಅದನ್ನು ಸಹನೆಯಿಂದಲೇ ಎದುರಿಸಬೇಕೆಂದು ಸೂಚಿಸುತ್ತಾಳೆ 'ಕಷ್ಟ-ಸುಖಗಳು ಕತ್ತಲು-ಬೆಳಕು ಇದ್ದಂತೆ, ಒಂದರ ನಂತರ ಒಂದು ಬರುವದು ಸ್ವಾಭಾವಿಕ. ಅದಕ್ಕೆ ಅಂಜಬಾರದು' ಎಂದು ಮಗಳಿಗೆ ಧೈರ್ಯ ತುಂಬುತ್ತಾಳೆ.

ಕಲ್ಲಕಡಬನ ಮಾಡಿ ಮುಳ್ಳಶಾವಿಗಿ ಮಾಡಿ
ಬನ್ನಿ ಎಲಿಯಾಗ ಎಡಿಮಾಡಿ | ಪಾಂಡೋರು
ಉಂಡು ಕಳಿದಾರ ಉಪವಾಸ
ಹಿಂದಕ್ಕ ನೋಡವ್ವ ಮುಂದಕ್ಕ ನಡಿಯವ್ವ
ಇಂದಿನೀ ಧ್ಯಾನ ಇರಲವ್ವ | ನನಕಂದ
ಕುಂದುಬರದ್ಹಾಂಗ ಬಾಳವ್ವ

ಎಂದು ನುಡಿದು ಕುಂದು ಬರದಂತ ಬಾಳಲು ಹೇಳಿ ಹೊರಟ ಹೋಗುತ್ತಾಳೆ. ಆಗ ಬಂದದ್ದನೆಲ್ಲಾ ಅನುಭವಿಸುತ್ತ, ಸಹನೆ ಯಿಂದ ಎಲ್ಲವನ್ನೂ ಎದೆಗುಂದದೆ ಎದುರಿಸುತ್ತ ತಾಯಿಯ ಮಾತನ್ನು ನೆನಪಿಸಿಕೊಳ್ಳುತ್ತ ಗರತಿ ಬಾಳು ಸಾಗಿಸುತ್ತಾಳೆ–ಬೆಳಕ ಬೆಳಗುತ್ತಾಳೆ.

ಹೀಗೆ ದಾಂಪತ್ಯದಲ್ಲಿ ಹರಡದ ವಿಷಮತೆ ಒಮ್ಮಿಂದೊ ಮ್ಮೆಲೇ ಬಂದ ವಿಷಗಳಿಗೆ ಕಳೆದು ಮತ್ತೆ ಹೊಸ ಬೆಳಕು ಬರುತ್ತ ನವಹಾಡು ನಿನದಿಸುತ್ತದೆ.

ಹೀಗೆ ಜನಪದ ಕಾವ್ಯದಲ್ಲಿ ಹರಡಿರುವ ಪ್ರಣಯ ಚಿತ್ರಣ ವಿಶಾಲವಾದುದು. ಇಂತಹ ಕಿರಿಹೊತ್ತಿಗೆಯಿಲ್ಲಿ ಅಂತಹ ಹಿರಿಯ ಚಿತ್ರವನ್ನು ತೋರಿಸುವದು ಅಸಾಧ್ಯವಾದುದು. ಇದನ್ನು ಹೇಳಿದಷ್ಟೂ ಕಡಿಮೆಯೆ-ಚಿತ್ರಿಸಿದಷ್ಟೂ ಉಳಿಯುತ್ತದೆ.

————

kup.wd. 988/5000/8-11-82